


ಕಲ್ಯಾಣ ಕಿರಣ

ಸೆಪ್ಟಂಬರ್ - 2013

ಬೆಲೆ-ರೂ.20



ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ
ಮಹಾಸ್ವಾಮಿಗಳ ಜಯಂತಿ
ಮತ್ತು
ರಾಷ್ಟ್ರೀಯ ಬಸವ ದಳ ಹುಟ್ಟು ಹಬ್ಬ



ಶರಣೆ. ಹೇಮರೆಡ್ಡಿ ಮಲ್ಲಮ್ಮ

ಕಲ್ಯಾಣ ಕಿರಣ

ಪೂಜ್ಯ ಜಗದ್ಗುರು ಸ್ವಾಮಿ ಲಿಂಗಾನಂದ

ಪೂಜ್ಯ ಜಗದ್ಗುರು ಸ್ವಾಮಿ ಲಿಂಗಾನಂದ
ಸ್ವಾಮಿ ವಿವೇಕಾನಂದರ ವೇಷದಿಂದ ಬಂದ ॥ ಪ ॥
ಶರಣೆ ಕಲ್ಲಮ್ಮ ಮಲ್ಲಪ್ಪ ಉದರದಿಂದ
ಮಣಿಗವಳ್ಳಿ ಊರಲ್ಲಿ ಜನಿಸಿದ ಕಂದ
ಆ ನಾಮವು ಮನಸಿಗೆ ಪರಮಾನಂದ
ನುಡಿದರೆ ನಾಲಿಗೆ ಸಂಪಿಗೆ ಮಕರಂದ ॥ 1 ॥
ದೈವ ಹುಟ್ಟಿಸಿದ ಘಳಿಗೆ ಅದೆಷ್ಟು ಚಂದ
ಬಸವ ಬೆಳಕನ್ನು ಚೆಲ್ಲುತ್ತ ನಡೆದು ಬಂದ
ಅವರ ಕಾಲ್ನಡಿಗೆ ಕಂಗಳಿಗಾದವೇನಾನಂದ
ಅದು ಭಾಗ್ಯವೆನ್ನಿರೀ ಕನ್ನಡ ನೆಲದ ॥ 2 ॥
ಕಾವಿ ಕಾಷಾಂಬರ ಮೈ ಮೇಲೆ ಬಳಸಿ
ಅಂಗದ ಮೇಲೆ ಲಿಂಗ ರುದ್ರಾಕ್ಷಿ ಇರಿಸಿ
ನೊಸಲಲ್ಲಿ ವಿಭೂತಿ ಪಟ್ಟವ ಧರಿಸಿ
ತ್ಯಾಗ ಮಾಡಿ ಬಂದಾರಾ ಯೋಗಿ ಊರೂರ ಅರಸಿ ॥ 3 ॥
ನಾವು ಬಂದೇವು ಗುಡಿ ಗುಂಡಾರಗಳ ದೇವರ ಸುತ್ತಿ
ಕಲ್ಲನಾಗನಿಗೆ ಹಾಲೆರೆದು ಮಾಡಿದೆವು ಭಕ್ತಿ
ಪೂಜೆ ಮಾಡಿ ಕೈ ಮುಗಿದು ಬೇಡಿದೆವು ಮುಕ್ತಿ
ಆಗ ಹರಡಿತ್ತು ಲಿಂಗಾನಂದರ ಕೀರ್ತಿ ॥ 4 ॥
ಸ್ವಾಮಿ ಮೂಢಭಕ್ತರ ಮನವನ್ನು ಒಲಿಸಿ
ಕರಸ್ಥಲದಲ್ಲಿ ಇಷ್ಟಲಿಂಗವನ್ನು ಇರಿಸಿ
ಒಂದೇ ದೇವರ ಮೇಲೆ ಭಕ್ತಿಯ ಬರಿಸಿ
ಲಿಂಗಪೂಜಾ ವಿಧಾನದ ಸಾರವ ತಿಳಿಸಿ ॥ 5 ॥
ಕನ್ನಡ ನಾಡಿನ ತುಂಬೆಲ್ಲ ಸುತ್ತಿ
ಬಸವ ತತ್ವವ ಹೇಳ್ಯಾರ ಎಲ್ಲರಿಗೊತ್ತಿ
ಉಚ್ಚ ನೀಚ ಭೇದ ಭಾವವ ಕಿತ್ತಿ
ಹೋದಲೆಲ್ಲ ಹಚ್ಚ್ಯಾರ ಬಸವ ಜ್ಯೋತಿ ॥ 6 ॥
ಲಿಂಗದೇವರು ನಮ್ಮ ಧರ್ಮದ ದೇವರು
ವಿಶ್ವಕ್ಕೆ ಗುರು ಅಪ್ಪ ಬಸವಣ್ಣನವರು
ಎಂದು ಮನದಟ್ಟು ಮಾಡ್ಯಾರ ಲಿಂಗಾನಂದರು
ಲಿಂಗ ಕಟ್ಯಾರ ಕೊರಳಲ್ಲಿ ಎಲ್ಲಾ ಕುಲದವರು ॥ 7 ॥
ತಂಡೋಪತಂಡ ಜನ ಬಂದಾರ ನಡಕೊಂಡು
ಅಪ್ಪ ಹೇಳುವ ಪ್ರವಚನದ ಸಾರ ಮೆಚ್ಚಿಕೊಂಡು
ಬಸವ ಭಕ್ತರಾಗ್ಯಾರ ಲಿಂಗ ತತ್ವ ತಿಳಕೊಂಡು
ಎಲ್ಲರೂ ಲಿಂಗಾಯತ ಧರ್ಮ ಒಪ್ಪಿಕೊಂಡು ॥ 8 ॥
ಎಂಥ ಗುರುವು ಪೂಜ್ಯ ಅಪ್ಪಾಜಿಯವರು
ಲಿಂಗತತ್ವ ಬೋಧಿಸಿದ ಸಂತಪುರುಷರು
ನಾಡಿನ ಪ್ರವಚನ ಪಿತಾಮಹರು
ಎಲ್ಲಾ ಜನಮನದ ಬಾಯಲ್ಲಿ ಲಿಂಗಾನಂದರು ॥ 9 ॥

– ಅಡವೆಪ್ಪಾ ಎಸ್.ಪಟ್ನೆ., ಔರಾದ್–ತಾ
ಅಮರೇಶ್ವರ ಪದವಿ ಮಹಾವಿದ್ಯಾಲಯ

II ಓಂ ಶ್ರೀ ಗುರು ಬಸವಲಿಂಗಾಯ ನಮಃ II

866666

ಸಂಪುಟ-44 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.

ಸಂಚಿಕೆ-9 ಸೆಪ್ಟೆಂಬರ್-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಅಕ್ಟೋಬರ್ ತಿಂಗಳಿನ ಹಬ್ಬ - ಹುಣ್ಣಿಮೆ-ಉತ್ಸವ

*ನವರಾತ್ರಿಯ ಶರಣೋತ್ಸವ ಪಾರಾಯಣ ಪ್ರಾರಂಭ-5

*ಹರಳಯ್ಯ -ಮಧುವರಸರ ಸಂಸ್ಮರಣೋತ್ಸವ - 13

*ಬಸವ ಧರ್ಮದ ವಿಜಯೋತ್ಸವ -14

*ಅಕ್ಕನಾಗಲಾಂಬಿಕ ಸಂಸ್ಮರಣೆ -14

*12ನೆಯ ಕಲ್ಯಾಣ ಪರ್ವ ಅಕ್ಟೋಬರ್ 16, 17ಮತ್ತು 18ರಂದು

*ಅಕ್ಕನಾಗಲಾಂಬಿಕ ಪೌರ್ಣಿಮೆ -18

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು. ಹಣ Transfer ಮಾಡುವವರು Bank of India, Rajajinagar, Bangalore-560010ದ Viswakalyan Mission Charitable Trust ದ S.B.A/c 840610100016409 ಖಾತೆಗೆ ನೇರವಾಗಿ ವರ್ಗಾಯಿಸಬಹುದು. NEFT ಮೂಲಕ ಬೇರೆ ಬ್ಯಾಂಕಿನಿಂದ ಕಳಿಸುವವರಿಗೆ IFSC: BK ID 0008406 ವರ್ಗಾವಣೆ ಮಾಡಿದ ನಂತರ ವಿವರಗಳನ್ನು ಫೋನ್ ಮೂಲಕ ಅಥವಾ ಪತ್ರದ ಮೂಲಕ ತಿಳಿಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್,
ಬೆಂಗಳೂರು-560010

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123

Email :- kalyanakirana1970@gmail.com

ಸಂಪಾದಕೀಯ :

ತತ್ವ ನಿಷ್ಠೆ ಮುಖ್ಯವೋ ವ್ಯಕ್ತಿ ಪ್ರೇಮ ಮುಖ್ಯವೋ?

ಬಸವ ಪಂಚಮಿಯ ವಿಶೇಷ ಕಾರ್ಯಕ್ರಮ ದಿ.12-8-2013ರಂದು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ನಡೆಯಿತಷ್ಟೆ. ಅಂದು ಶರಣೆ. ಭಾಗ್ಯಮ್ಮ ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿ ಒಂದು ರೂಪಕ ಪ್ರದರ್ಶನಗೊಂಡಿತು. "ಶರಣೆಯರ ಭಕ್ತಿ ವೈಭವ" ಎಂದು ಅದರ ಹೆಸರು. 12ನೆಯ ಶತಮಾನದ ಶರಣೆಯರು ಮುಖ್ಯವಾಗಿ 33 ವಚನಕಾರ್ತಿಯರನ್ನು ಪರಿಚಯಿಸುವ ಪರಿಕಲ್ಪನೆ ಹೊಂದಿದ್ದಿತು. ಶರಣೆಯ ಹೆಸರನ್ನು ನಿರೂಪಕರು ಹೇಳುತ್ತಲೇ ಆಕೆ ಬರುತ್ತಾಳೆ. ಆ ವಚನಕಾರ್ತಿಯ ಒಂದು ವಚನವನ್ನು ಒಬ್ಬರು ಹಾಡಿದಾಗ ಪಾತ್ರಧಾರಿಯು ತುಟಿಮಿಟುಕಿಸಿ, ಅಭಿನಯ ಮಾಡುತ್ತಾಳೆ. ವಚನಗಳನ್ನು ಹಾಡಿದವರು ಸುಶ್ರಾವ್ಯಕಂಠದಿಂದ ಹಾಡಿದರು. ಶರಣೆ. ಭಾಗ್ಯಮ್ಮನವರ ನಿರೂಪಣೆ ಅಮೋಘವಾಗಿತ್ತು.

ಆದರೆ ಒಂದು ಪ್ರಸಂಗ ನಡೆಯಿತು. ರೂಪಕ ಶುರುವಾಗಿ ಶರಣೆಯರು ಬರುವ ಮೊದಲು ಒಂದು ಪೇಪರ್ ಪಲ್ಪ್‌ನಲ್ಲಿ ಮಾಡಿದ ಸ್ಥಾವರ ಲಿಂಗವನ್ನು ತಂದು ವೇದಿಕೆ ಮಧ್ಯದಲ್ಲಿ ಟೀಪಾಯ್ ಮೇಲೆ ಇಟ್ಟರು. ಅದನ್ನು ನೋಡುತ್ತಲೇ ನಮ್ಮ ಸಭಿಕರು ಗಾಬರಿಗೊಂಡು ಪಿಸುಪಿಸು ಮಾತನಾಡ ತೊಡಗಿದರು. ಬಂದ ಶರಣೆಯರೆಲ್ಲ ಅವರ ವಚನಾಂಕಿತವನ್ನು ಹೇಳುವಾಗ ಆ ಸ್ಥಾವರಲಿಂಗಕ್ಕೆ ನಮಸ್ಕರಿಸುವ ಪರಿಪಾಠ ಆರಂಭಿಸಿದರು. ಶರಣೆಯರ ಏಕದೇವೋಪಾಸನೆಗೆ ಚ್ಯುತಿ ತರುವ ಸಂಗತಿ. ಸ್ಥಾವರ ಲಿಂಗ ನೋಡುತ್ತಲೇ 'ಇಡಬೇಡಿ' ಎಂದು ಹೇಳಿ ಕಳಿಸಿದೆವು. ತಾಯಿ ಮಗಳು ಒಪ್ಪಲಿಲ್ಲ. ರೂಪಕ ಶುರುವಾಗಿ ಇಬ್ಬರು-ಮೂವರು ಶರಣೆಯರು ಸ್ಥಾವರ ಲಿಂಗಕ್ಕೆ ನಮಸ್ಕರಿಸುತ್ತಲೇ ಜನರು ತಾಳ್ಮೆಗೆಟ್ಟರು. "ಇದು ಬಸವ ತತ್ವಕ್ಕೆ ಅಪಚಾರ, ಸಹಿಸಿಕೊಳ್ಳಲು ಸಾಧ್ಯವಿಲ್ಲ" ಎಂದು ಕಾರ್ಯಕರ್ತರನ್ನು ಸ್ಥಾವರಲಿಂಗ ತೆಗೆಯಲು ಒತ್ತಾಯಿಸತೊಡಗಿದರು. 'ಎಂಥ ಅಪಚಾರವಾಗುತ್ತಿದೆ!' ಎಂದು ತೆಗೆಯಲು ನಾನೂ ಒಪ್ಪಿಗೆ ಕೊಟ್ಟೆ. ತೆಗೆದು, (ಸೂಕ್ತವೆನಿಸದಿದ್ದರೂ) ಗುರು ಬಸವಣ್ಣನವರ ಮೂರ್ತಿ ಇಟ್ಟರು. ಏಕೆಂದರೆ ಪಾತ್ರಧಾರಿಗಳಿಗೆ ಕೈ ತೋರಿಸುವುದು ಅಭ್ಯಾಸವಾಗಿ ಬಿಟ್ಟಿದ್ದಿತು. ನಮ್ಮ ಬಸವ ಮಂಟಪಕ್ಕೆ ಬರುವ ನಾಲ್ವರು ಶರಣೆಯರು ಹೋಗಿ ಭಾಗವಹಿಸಿದ್ದರು. ಅವರು ಮಾತ್ರ ಎಡಗೈ ಎತ್ತಿ ಅದರಲ್ಲಿರುವ ಇಷ್ಟಲಿಂಗಕ್ಕೆ ನಮಿಸುತ್ತಿದ್ದರು. ಬಾಕಿ ಪಾತ್ರಧಾರಿಗಳಿಗೆ ಇಷ್ಟಲಿಂಗ-ಸ್ಥಾವರಲಿಂಗಗಳ ವ್ಯತ್ಯಾಸವೇ ಗೊತ್ತಿರಲಿಲ್ಲ. ಲಿಂಗಾಯತರಿಗೆ ತಮ್ಮ ಧರ್ಮದ ಮೂಲಭೂತ ಜ್ಞಾನವೂ ಇಲ್ಲವಲ್ಲ ಎಂದು ಮನಸ್ಸಿಗೆ ಖೇದವೆನಿಸಿತು. ಅನೇಕ ಮಠಾಧಿಪತಿಗಳೇ ಬಹುದೇವತೋಪಾಸಕರು ಎಂದಾಗ ಇನ್ನು ಸಾಮಾನ್ಯ ಜನರ ಪಾಡೇನು? ವಚನಾಂಕಿತ ಹೇಳುವಾಗ ತಮ್ಮ ಇಷ್ಟಲಿಂಗದ ಕಡೆಗೆ ಕೈತೋರಿಸಬೇಕು ಎಂದು ಕಡೆಯಲ್ಲಿ ನಾನು ವಿಮರ್ಶಿಸಿದೆ.

ಸ್ಥಾವರಲಿಂಗ ಎತ್ತಿ ಇಡಿಸಿದ್ದರಿಂದ ನಿರೂಪಕರಿಗಿಂತ ಹೆಚ್ಚಾಗಿ ಅವರ ಮಗಳಿಗೆ ಅವಮಾನ ವಾಯಿತಂತೆ. ಶಾಲು ಹೊದ್ದಿಸಿ ಸನ್ಮಾನ ಮಾಡಲು ಕರೆದಾಗ ಭಾಗ್ಯಮ್ಮನವರನ್ನು ಅವರ ಮಗಳು ಬಿಡಲಿಲ್ಲ. ಆದರೆ ಇವರು ಶರಣರ ತತ್ವಗಳಿಗೆ ಅವಮಾನ ಮಾಡಿದ್ದು ಸರಿಯೊ? ಭಾಗ್ಯಮ್ಮ ನಮಗೆ ಆತ್ಮೀಯರು, ಆದರೆ ನಮಗೆ ವ್ಯಕ್ತಿ ಪ್ರೇಮಕ್ಕಿಂತ ತತ್ವನಿಷ್ಠೆ ಮುಖ್ಯ.

ಬೆಂಗಳೂರಿನಲ್ಲಿ ವಚನ ಸಾಹಿತ್ಯ ಸಮ್ಮೇಳನವು ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರ ನೇತೃತ್ವದಲ್ಲಿ ನಡೆಯಿತು. ಗಣಪತಿ ಸ್ತೋತ್ರ, ರಾಮನ ಭಜನೆ ಅದರಲ್ಲಿ ನಡೆದಾಗ ರಾಷ್ಟ್ರೀಯ ಬಸವ ದಳದ ಶ್ರೀಶೈಲ ಮಸೂತಿ ಪ್ರತಿಭಟಿಸಿದರಂತೆ. ಗುರು ಬಸವಣ್ಣನವರ ಪ್ರಾರ್ಥನೆ ಮಾಡದ್ದು ಬೌದ್ಧಿಕ ದೌರ್ಬಲ್ಯವೋ ದಾರಿದ್ರ್ಯವೋ?!

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹನ್ನೆರಡನೆಯ

ಕಲ್ಯಾಣ ಪರ್ವ

2013ರ ಅಕ್ಟೋಬರ್ 16,17 ಮತ್ತು 18ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 26ನೆಯ ಶರಣ ಮೇಳವು ಇದೇ 2013ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2013ನೆಯ ಇಸವಿಯಲ್ಲಿ 12ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆ ಯಂದು ಅಕ್ಟೋಬರ್ 16,17 ಮತ್ತು 18ರಂದು ನಡೆಯಲಿದೆ.

ಚನ್ನ(ಬುಧ)ವಾರ ದಿ. 16ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ಧಾರ್ಮಿಕ ರಸಪ್ರಶ್ನೆ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.17 ಪ್ರಭು(ಗುರು) ವಾರದಂದು ಬೆಳಿಗ್ಗೆ 10-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ

ಚಿಂತನಗೋಷ್ಠಿ, ದಿ.18 ಮಾತೃ(ಶುಕ್ರ)ವಾರದಂದು ಅಕ್ಕನಾಗಲಾಂಬಿಕೆಯ ಪೌರ್ಣಿಮೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 15ರ ರಾತ್ರಿಯಿಂದ ಅಕ್ಟೋಬರ್ 19 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	:	10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	:	5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	:	2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	:	1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	:	500 ರೂ
6. ಪ್ರತಿನಿಧಿ ಶುಲ್ಕ	:	150 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎:080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ಭಾಗ-56

ಬಸವ ವಚನಾಮೃತ

- ಮಾತಾಜಿ

1290. ಮಡಿವಾಳನೆಂಬ ಪರುಷ.

ಅಯ್ಯಾ, ಎನ್ನ ಕಾಯದಲ್ಲಿ ಮಡಿವಾಳನ ತೋರಿದ;
ಎನ್ನ ಮನದಲ್ಲಿ ತನ್ನ ನಿಲವ ತೋರಿದ;
ಎನ್ನ ಅರಿವಿನಲ್ಲಿ ನಿಮ್ಮ ತೋರಿದ
ಇಂತೀ ತ್ರಿವಿಧಸ್ವಾಯತವನು ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ತೋರಿದ
ಲಿಂಗದೇವಯ್ಯಾ, ಚನ್ನಬಸವಣ್ಣನ ಕರುಣದಿಂದ
ಮಡಿವಾಳನೆಂಬ ಪರುಷ ಸಾಧ್ಯವಾಯಿತೆನಗೆ.

ಮಡಿವಾಳ ಮಾಚಿದೇವರು ಗುರು ಬಸವಣ್ಣನವರ ದೇಹದ ನೆರಳಿನಂತಿದ್ದರು. ಅವರಿಬ್ಬರ ದೇಹಗಳು ಎರಡು ಪ್ರಾಣವೊಂದೇ ಎಂಬಂತಿದ್ದರು. ಎಲ್ಲ ಶರಣರು ಗುರು ಬಸವಣ್ಣನವರನ್ನು ಆರಾಧಿಸುತ್ತಿದ್ದರು. ಆದರೆ ಮಾಚಿದೇವರು ಕೇವಲ ಗೌರವದಿಂದ ಆರಾಧಿಸುವುದಷ್ಟೇ ಅಲ್ಲ ಉತ್ಕಟವಾಗಿ ಪ್ರೀತಿಸುತ್ತಿದ್ದರು. ಮಡಿವಾಳ ಮಾಚಿದೇವರ ಸರ್ವಾಂಗವನ್ನು ಗುರು ಬಸವಣ್ಣನವರು ವ್ಯಾಪಿಸಿದ್ದಾರೆ. ಗುರು ಬಸವಣ್ಣನವರ ಸರ್ವಾಂಗವನ್ನು ಮಡಿವಾಳ ಮಾಚಿದೇವರು ವ್ಯಾಪಿಸಿದ್ದಾರೆ ಎಂಬುದನ್ನು ಚನ್ನಬಸವಣ್ಣನವರು ಮನವರಿಕೆ ಮಾಡಿಕೊಟ್ಟರು. ಅವರ ಮನವನ್ನು ಸ್ವತಃ ಚನ್ನಬಸವಣ್ಣನವರೇ ಗೆದ್ದಿದ್ದರು. ಅರಿವಿನಲ್ಲಿ ದೇವಪ್ರಜ್ಞೆಯನ್ನು ಹೊಂದುವಂತೆ ಮಾಡಿ ತ್ರಿವಿಧ ಸ್ವಾಯತವನ್ನು ಸರ್ವಾಂಗದಲ್ಲಿ ಪ್ರತಿಷ್ಠಾಪಿಸಿದರು. ಹೀಗಾಗಿ ಚನ್ನಬಸವಣ್ಣನ ಕರುಣದಿಂದ ಮಡಿವಾಳನೆಂಬ ಪರುಷವು ಗುರು ಬಸವಣ್ಣನವರಿಗೆ ಸಾಧ್ಯವಾಯಿತು.

1291. ಮಹಾನುಭಾವಿ ಚನ್ನಬಸವಣ್ಣ.

ಘನವನರಿದು ಘನವವೇಧಿಸಿ
ಘನ ಗುರುವ ತನ್ನೊಳಗೆ ಬೈಚಿಟ್ಟ ಪರಿಣಾಮಿಯ ನೋಡಾ !
ಗುರುಲಿಂಗಜಂಗಮದಲ್ಲಿ ತನುಮನಧನವ
ವೇಧಿಸುವ ಪರಿಯ ನೋಡಾ !
ಕಾಯ ಪ್ರಸಾದದಲ್ಲಿ ಸ್ವಾಯತವ ಮಾಡಿಕೊಂಡಿಪ್ಪ ಪರಿಯ ನೋಡಾ
ಷಡುಸ್ಥಲದಲ್ಲಿ ಸ್ವಾಯತವಾದ ಲಿಂಗದೇವರಲ್ಲಿ ಚನ್ನಬಸವಣ್ಣನು.

ಪರಾತ್ಪರ ಪರವಸ್ತುವನ್ನರಿತು, ಅದನ್ನು ಅಳವಡಿಸಿಕೊಂಡು, ಗುರು ತತ್ತ್ವವ ತನ್ನೊಳಗೆ ಅಡಗಿಸಿಕೊಂಡ ಪರಿಣಾಮಿ, ಸಂತೃಪ್ತ ಚನ್ನಬಸವಣ್ಣ. ಗುರುವಿಗೆ ತನುವನ್ನು ಲಿಂಗಕ್ಕೆ ಮನವನ್ನು ಜಂಗಮಕ್ಕೆ ಧನವನ್ನು ಸಮರ್ಪಿಸಿದ ಸುಯಿಧಾನಿ. ಪ್ರಸಾದ ತತ್ತ್ವವನ್ನು ಅಳವಡಿಸಿಕೊಂಡು ಕಾಯವನ್ನು ದೈವೀಕರಿಸಿಕೊಂಡ ಮಹಾ ಮಹಿಮ. ಷಡುಸ್ಥಲದ ಹಂತಗಳನ್ನು ಸ್ವಾಯತವ ಮಾಡಿಕೊಂಡ ಮಹಾನುಭಾವಿ ಚನ್ನಬಸವಣ್ಣ.

1292. ನಿಜಗುಣಿ ಚನ್ನಬಸವಣ್ಣ

ನಿರ್ಲೇಪವಾದ ನಿಜಗುಣಿ ನೋಡಯ್ಯಾ
ಕಾಮಿಸದ ಕಲ್ಪಿಸದ ಪ್ರಸಾದಿ ನೋಡಯ್ಯಾ
ಬಯಸಲಿಲ್ಲದ ಪ್ರಸಾದಿ ಗುರುವಿನ ಮುಖದಿಂದ ಬಂದ
ಪ್ರಸಾದವಲ್ಲದೆ
ಮತ್ತೇನನೂ ಮುಟ್ಟಲೀಯನು
ಲಿಂಗದೇವರಲ್ಲಿ ಚನ್ನಬಸವಣ್ಣನು.

ಗುರುಬಸವಣ್ಣನವರು ತಮ್ಮ ಶಿಷ್ಯ ಚನ್ನಬಸವಣ್ಣನನ್ನು ಹೊಗಳಿದಂತೆ ಯಾವ ಗುರುವೂ ಹೊಗಳಲಿಕ್ಕಿರಲಿಲ್ಲ. ಚನ್ನಬಸವಣ್ಣನವರೂ ಅಷ್ಟೇ ಸಮರ್ಥರಿದ್ದರು. ಯಾವುದಕ್ಕೂ ಅಂಟಿಕೊಳ್ಳದ ನಿರ್ಲೇಪ ಪ್ರಜ್ಞೆಯನ್ನು ಹೊಂದಿದ ನಿಜಗುಣ ಸಂಪನ್ನರಾಗಿದ್ದರು. ಯಾವುದೊಂದಕ್ಕೂ ಆಸೆ ಮಾಡದ, ಅನವಶ್ಯಕ ಕಲ್ಪನೆ ಮಾಡಿಕೊಳ್ಳದ ಪ್ರಸಾದಿಯಾಗಿದ್ದರು. ದಿನ ನಿತ್ಯ ಗುರು (ಬಸವಣ್ಣನವರಿಂದ) ಮುಖದಿಂದ ಬಂದ ಪ್ರಸಾದವನ್ನಲ್ಲದೆ ಬೇರೆ ಸ್ವೀಕರಿಸುತ್ತಿರಲಿಲ್ಲ. ಇಂಥ ನಿಷ್ಠಾವಂತನು ಲಿಂಗದೇವರಲ್ಲಿ ಚನ್ನಬಸವಣ್ಣನು.

1293. ಭಕ್ತಿಯ ಉದ್ದೀಪಕ

ಲಿಂಗ ಗಂಭೀರದೊಳಗೆ ಜಗ ಹುಟ್ಟಿದಡೇನು,
ಆ ಲಿಂಗದಿಂದ ಘನವೆ ?
ಶಿವಲಿಂಗದೊಳಗೆ ಜಗ, ಜಗದೊಳಗೆ ಶಿವಲಿಂಗ,
ಲೋಕಾದಿಲೋಕಂಗಳಿಗೆ ನೀನು
ಭಕ್ತಿಯ ಕಂದೆರೆದು ತೋರಿದೆ
ಲಿಂಗದೇವರಲ್ಲಿ ಚನ್ನಬಸವಣ್ಣಾ
ನಿನ್ನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಸರ್ವವ್ಯಾಪಿಯಾದ ದೇವನ ಗರ್ಭದಲ್ಲಿ ಜಗತ್ತು ಹುಟ್ಟುವುದು. ಆದರೆ ಜಗತ್ತು ಲಿಂಗಕ್ಕಿಂತಲೂ ಘನವಲ್ಲ. ಲಿಂಗದೊಳಗೆ ಜಗತ್ತು, ಪುನಃ ಜಗತ್ತಿನಲ್ಲಿ ದೇವನು ಸರ್ವಾಂತರ್ಯಾಮಿಯಾಗಿ ಇರುತ್ತಾನೆ. ನೀನು ಸ್ವತಃ ಲಿಂಗಭಕ್ತಿಯನ್ನು ಅಳವಡಿಸಿಕೊಂಡು ಇಡೀ ಜಗತ್ತಿಗೆ ಭಕ್ತಿಯ ಹಿರಿಮೆ ಏನಿದೆ ಎಂಬುದನ್ನು ತೋರಿದೆ. ಚನ್ನಬಸವಣ್ಣಾ, ನಿನ್ನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

1294. ಪರಮ ವಿರಕ್ತ ಚನ್ನಬಸವಣ್ಣ.

ಅಂಗವಿಕಾರವಳಿದು ಸತಿಯ ಸಂಗವರಿಯ ನೋಡಾ
ದೇಹಗುಣಂಗಳಿಲ್ಲಾಗಿ ನಿರ್ದೇಹಿ ಪ್ರಸಾದಿ ನೋಡಯ್ಯಾ
ಅಶನವ್ಯಸನಾದಿಗಳೆಲ್ಲವು ಬೆಂದವು ನೋಡಯ್ಯಾ
ಈ ಎಲ್ಲ ಗುಣಂಗಳಳಿದು ಲಿಂಗದೇವರಲ್ಲಿ
ಸಾವಧಾನಿ, ಪ್ರಸಾದಿ ಚನ್ನಬಸವಣ್ಣನು.

ಶರೀರದ ವಿಕಾರವಳಿದು ಪರಮವೈರಾಗ್ಯ ಮೂರ್ತಿಯಾದ ಕಾರಣ ಸ್ತ್ರೀ ಮೋಹಿಯಾಗಲಿಲ್ಲ, ಸತಿಯ ಸಂಗದ ಕಡೆಗೆ (ಮದುವೆಗೆ) ಒಲವು ತೋರಲಿಲ್ಲ. ದೇಹ ಗುಣಗಳಾದ ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ, ಬಯಕೆಗಳನ್ನು ಕಳೆದುಕೊಂಡ ಕಾರಣ ಈತ ನಿರ್ದೇಹಿಯೆ ಎಂಬ ಭಾವ ಬರುತ್ತದೆ. ಅಶನದ ಕಡೆಗೆ ಗಮನವಿಲ್ಲ, ವ್ಯಸನದಾಸೆ ಇಲ್ಲ. ಇವೆಲ್ಲವೂ ಜ್ಞಾನಾಗ್ನಿಯಲ್ಲಿ ಬೆಂದು ಹೋಗಿವೆ. ಶರೀರ ಗುಣ, ಮನೋಗುಣಗಳಳಿದು ಲಿಂಗದೇವನಲ್ಲಿ ಚನ್ನಬಸವಣ್ಣನು ಇದ್ದಾನೆ.

1295. ಚನ್ನಬಸವಣ್ಣನೇ ಕರ್ತ.

ಗುರುವಿಂಗೆ ನೀನೇ ಕರ್ತ, ಲಿಂಗಕ್ಕೆ ನೀನೆ ಕರ್ತ,
ಜಂಗಮಕ್ಕೆ ನೀನೇ ಕರ್ತ,
ಪ್ರಸಾದಕ್ಕೆ ನೀನೆ ಕರ್ತ, ಉಪದೇಶಕ್ಕೆ ನೀನೆ ಕರ್ತ.
ಲಿಂಗದೇವರು ಸಾಕ್ಷಿಯಾಗಿ,

ಎನಗೆಯೂ ನೀನೆ ಕರ್ತನಾದ ಕಾರಣ ನಾನು ಬೇಕೆನಲಮ್ಮೆ
ಬೇಡೆನಲಮ್ಮೆ ಕಾಣಾ ಚನ್ನಬಸವಣ್ಣಾ.

ಗುರು, ಲಿಂಗ, ಜಂಗಮ, ಪ್ರಸಾದ ಈ ತತ್ತ್ವಗಳನ್ನು ಉಪದೇಶಿಸಿದವನು ನೀನೆ. ಹೀಗಾಗಿ ನನಗೆಯೂ ನೀನೇ ಕರ್ತನಾದ ಕಾರಣ ನೀನು ಹೇಳಿದಂತೆ ಕೇಳುವೆನಲ್ಲದೆ ನಾನು ಬೇಕು ಎನ್ನುವುದಿಲ್ಲ. ಬೇಡ ಎನ್ನುವುದೂ ಇಲ್ಲ ಎನ್ನುತ್ತಾರೆ ಗುರು ಬಸವಣ್ಣನವರು.

ತಮ್ಮನ್ನು ತಾವು ತಗ್ಗಿಸಿಕೊಂಡು ಇತರ ಶರಣರನ್ನು ಹಿರಿದಾಗಿಸಿ ಮಾತನಾಡುವುದು ಗುರು ಬಸವಣ್ಣನವರ ಸ್ವಭಾವ. ಪ್ರಭುದೇವರಾಗಲಿ, ಚನ್ನಬಸವಣ್ಣನಾಗಲಿ, ಮಡಿವಾಳ ಮಾಚಿದೇವರಾಗಲಿ, 'ನಿನ್ನಿಂದ ನಾನಾದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ?' ಎಂದೇ ಹೇಳುತ್ತಾರೆ. ಇನ್ನೊಬ್ಬರಲ್ಲಿದ್ದ ವಿಶೇಷ ಗುಣವನ್ನು ಮನತುಂಬಿ ಹೊಗಳುವ ಸದ್ಗುಣ ಗುರು ಬಸವಣ್ಣನವರದು.

1296. ದೀಕ್ಷೆಗಾಗಿ ಬೇಡಿಕೆ.

ಆದಿಯನಾದಿಯಿಂದತ್ತತ್ತ ಮುನ್ನ.
ಲಿಂಗಜಂಗಮವೆಂಬುದನಾರು ಬಲ್ಲವರಿಲ್ಲವೆಂದು
ಇದರ ಸಕೀಲಸಂಬಂಧವ ತಿಳುಹಲೆಂದು
ಮರ್ತ್ಯಕ್ಕೆ ಬೆಸಸಿ ಕಳುಹಿದನು ಶಶಿಧರನು.
ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನಲ್ಲದೆ
ಮತ್ತಾರನೂ ಕಾಣೆ, ಶಿಷ್ಯಂಗೆ ಗುರು ಉಪದೇಶವ ಮಾಡಬೇಕಲ್ಲದೆ
ಗುರುವಿಂಗೆ ಶಿಷ್ಯನನುಗ್ರಹವ ಮಾಡಿದ ಠಾವುಂಟೆ ?
ಎನ್ನ ಅರಿವಿನ ಆದಿಗೆ ನೀನೆ ಕರ್ತನೆಂದು ನಾನಿರುತಿರಲು
ನಿನಗೆ ನಾನಿನ್ನು ಅನುಗ್ರಹವ ಮಾಡುವ ಪರಿ ಎಂತಯ್ಯಾ?
ಲಿಂಗದೇವರ ಸ್ವರೂಪವೆಂದು ನಿನ್ನ ಕಂಡಿಪ್ಪೆನು
ಕಾಣಾ ಚನ್ನಬಸವಣ್ಣಾ.

ಈ ಮೊದಲಿಗೆ ಲಿಂಗದೇವನ ಸ್ವರೂಪ, ಜಂಗಮದ ಸೇವೆ ಕುರಿತು ಯಾರೂ ಹೇಳಿರಲಿಲ್ಲ ಎಂದು ಲಿಂಗಜಂಗಮದ ಸಕೀಲ ಸಂಬಂಧವ ತಿಳಿಸಲೆಂದು ಮರ್ತ್ಯಲೋಕಕ್ಕೆ ಶಶಿಧರನು ಆಜ್ಞಾಪಿಸಿ ನನ್ನನ್ನು ಕಳಿಸಿದನು. ಅಂಗದ ಮೇಲೆ ಲಿಂಗವುಳ್ಳವರನ್ನೆಲ್ಲ ನಾನು ಸಂಗಮನಾಥ ಎಂದೇ ಕಾಣುತ್ತೇನೆ.

ಈ ಜಗತ್ತಿನಲ್ಲಿ ರೂಢಿ ಎಂದರೆ ಶಿಷ್ಯನಿಗೆ ಗುರು ಉಪದೇಶ ಮಾಡಬೇಕಲ್ಲದೆ ಗುರುವಿಂಗ ಶಿಷ್ಯ ಉಪದೇಶ ಮಾಡಬೇಕಿಲ್ಲ. ನನ್ನ ಜ್ಞಾನದ ಮೊದಲಿಗೆ ನೀನು ಕರ್ತನು, ಗುರುವು ಎಂದು ನಾನು ಭಾವಿಸಿದ್ದೇನೆ. ಹೀಗಿರುವಾಗ ನಾನು ನಿನಗೆ ಅನುಗ್ರಹ ಹೇಗೆ ಮಾಡಲಿ? ವಯಸ್ಸಿನಲ್ಲಿ ನನಗಿಂತಲೂ ನೀನು ಚಿಕ್ಕವನಿರಬಹುದು. ಆದರೆ ನಾನು ನಿನ್ನನ್ನು ಲಿಂಗದೇವರ ಸ್ವರೂಪವೆಂದು ಕಾಣುತ್ತಿದ್ದೇನೆ ಚನ್ನಬಸವಣ್ಣ.

ಒಂದಾನೊಂದು ದಿನ ಚನ್ನಬಸವಣ್ಣನವರು ಬಂದು ಇಷ್ಟಲಿಂಗಪೂಜೆಗೆ ಕುಳಿತ ಗುರು ಬಸವಣ್ಣನವರಲ್ಲಿ ತಮಗೆ ದೀಕ್ಷಾನುಗ್ರಹವಾಗಬೇಕೆಂದು ಬೇಡಿಕೆ ಸಲ್ಲಿಸಿದಾಗ ಅವರು ನೀಡಿರುವ ಪ್ರತಿಕ್ರಿಯೆ ಇದು.

1297. ಪುನರ್ಜನ್ಮವಿಲ್ಲ

ಅಯ್ಯಾ, ಮರದೊಳಗೆ ಅಗ್ನಿ ಇದ್ದಡೇನಯ್ಯ
ಮಥನಿಸಿ ತೋರುವರಿಲ್ಲದನ್ನಕ್ಕರ ಕಾಣಬಹುದೆ?

ಜಗದೊಳಗೆ ಕೂಡೆ ಪರಿಪೂರ್ಣ ಶಿವನೆಂದಡೆ
ಅಂತರಂಗದಲ್ಲಿ ಕಾಣಬಹುದೆ?
ಆದಿ ಲಿಂಗ ಅನಾದಿ ಶರಣನ ಭೇದವ ತಿಳುಹಿ,
ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗವ ಕರಸ್ಥಲಕ್ಕೆ ತಂದು,
ಆ ಕರಸ್ಥಲದ ಲಿಂಗವನೆ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋರಿ.
ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಹರಿವ ತೋರಿ,
ಮರ್ತ್ಯಲೋಕದೊಳಗೆಲ್ಲಾ ಇಂದು ಮೊದಲಾಗಿ
ಪ್ರಾಣಲಿಂಗದ ಘನವ ಹರಹಿ ಶಿವಭಕ್ತಿಯನುದ್ಧರಿಸಿದೆನು.
ಲಿಂಗದೇವರಲ್ಲಿ, ಚನ್ನಬಸವಣ್ಣನೆನ್ನನಾಗು ಮಾಡಿ ಉಳುಹಿದನಾಗಿ
ಇನ್ನು ಮರ್ತ್ಯಲೋಕಕ್ಕೆ ಬಂದಡೆ ಚನ್ನಬಸವಣ್ಣನ ಪಾದದಾಣೆ.

ಕಟ್ಟಿಗೆಯಲ್ಲಿ ಬೆಂಕಿಯು ಹುದುಗಿರುತ್ತದೆ. ಆದರೆ ಅದನ್ನು ಜಾಗ್ರತಗೊಳಿಸಲು ಯಾರಾದರೂ ಬೇಕು. ಕಿಡಿ ಹಚ್ಚಿ ಘರ್ಷಿಸಿ ಜಾಗ್ರತಗೊಳಿಸಲು ಯಾರೂ ಇಲ್ಲದಿದ್ದರೆ ಆ ಅಗ್ನಿ ಸುಪ್ತಾವಸ್ಥೆಯಿಂದ ಹೊರಬರದು. ಅದೇ ರೀತಿ ಪರಮಾತ್ಮನು ಜಗತ್ತಿನಲ್ಲೆಲ್ಲ ವ್ಯಾಪಿಸಿಕೊಂಡಿದ್ದಾನೆ ಎಂದ ಮಾತ್ರಕ್ಕೆ ಅವನನ್ನು ಅಂತರಂಗದಲ್ಲಿ ಎಲ್ಲರೂ ಕಾಣಲು ಸಾಧ್ಯವಿಲ್ಲ. ಆದಿ ಲಿಂಗ ಅನಾದಿ ಶರಣ ಎಂಬಂತೆ, ನನ್ನಿಂದ ಇಷ್ಟಲಿಂಗವು ರೂಪುಗೊಂಡಿದೆ. ಈ ಇಷ್ಟಲಿಂಗವು ಜಗದೊಳಗೆ ಪರಿಪೂರ್ಣನಾಗಿಹ ಪರಮಾತ್ಮನ ಕುರುಹು ಮಾತ್ರವಲ್ಲ ಪ್ರಾಣದೊಳಗೆ ಅಡಗಿರುವ ಸುಜ್ಞಾನ ಲಿಂಗದ ಪ್ರತೀಕ ಈ ಕರಸ್ಥಲದ ಲಿಂಗದ ಪ್ರಭೆಯನ್ನು ಸರ್ವಾಂಗದೊಳಗೆ ಪ್ರತಿಷ್ಠಾಪಿಸಿಕೊಳ್ಳುವ ವಿಧಾನವನ್ನು ತೋರಿ, ಅಂತಿಮವಾಗಿ ಲಿಂಗದೇವನಲ್ಲಿ ಹೇಗೆ ಐಕ್ಯವಾಗಬೇಕು ಎಂಬ ಮರ್ಮವನ್ನು ಎಲ್ಲರಿಗೂ ತೋರಿ, ಮರ್ತ್ಯಲೋಕದೊಳಗೆ ಪ್ರಾಣಲಿಂಗದ ಸಾಧನೆಯನ್ನು ವಿಸ್ತರಿಸಿ ಶಿವಭಕ್ತಿಯನ್ನು ವೃದ್ಧಿಸಿದೆನು. ಈ ಕಾರ್ಯದಲ್ಲಿ ಚನ್ನಬಸವಣ್ಣ ಸಂಪೂರ್ಣವಾಗಿ ಸಹ ಜೋಡಿಯಾಗಿ ನಿಂತನು. ನಾನಿನ್ನು ಪುನಃ ಮರ್ತ್ಯಲೋಕದಲ್ಲಿ ಹುಟ್ಟಿ ಬರುವುದಿಲ್ಲ. ನಾನೀಗ ಪರಿಪೂರ್ಣನಾದ ಕಾರಣ ಭವಕ್ಕೆ ಬರುವುದಿಲ್ಲ.

1298. ಪ್ರಾಣಲಿಂಗ ಸಾಧನೆ, ಜಂಗಮ ದಾಸೋಹ

ಅಂಗದ ಮೇಲೆ ಲಿಂಗ ಆಯತವಾಗಿ
ಲಿಂಗಾರ್ಚನೆಯ ಮಾಡಿದಡೆ ಭವ ಹಿಂಗದೆಂದು
ಪ್ರಾಣದ ಮೇಲೆ ಲಿಂಗ ಆಯತವ ಮಾಡಿ
ಎನ್ನಂತರಂಗ ಶುದ್ಧವ ಮಾಡಿ
ಲಿಂಗೈಕ್ಯದ ಹೊಲಬ ತೋರಿದನಯ್ಯಾ ಚನ್ನಬಸವಣ್ಣನು
ಕಾಯದ ಕಳವಳವು ದಾಸೋಹದ ಮುಖದಲ್ಲಿ ಅಲ್ಲದೆ ಹರಿಯದೆಂದು
ಜಂಗಮಮುಖ ಲಿಂಗವಾಗಿ ಬಂದು ಎನ್ನ ಶಿಕ್ಷಿಸಿ, ರಕ್ಷಿಸಿ
ಎನ್ನ ಸಂಸಾರದ ಪ್ರಕೃತಿಯ ಹರಿದನಯ್ಯಾ ಪ್ರಭುದೇವರು.
ಲಿಂಗದೇವರಲ್ಲಿ
ಪ್ರಭುದೇವರ ಚನ್ನಬಸವಣ್ಣನ ಕರುಣದಿಂದಲಾನು ಬದುಕಿದೆನು.

ಗುರುವಿನಿಂದ ಮಂತ್ರೋಪದೇಶ, ಲಿಂಗಧಾರಣೆಯಾಗುತ್ತದೆ. ಲಿಂಗವನ್ನು ಆಯತ ಮಾಡಿಕೊಂಡು ನಿತ್ಯವೂ ಭಕ್ತನು ಪೂಜೆ ಮಾಡತೊಡಗುತ್ತಾನೆ. ಇಷ್ಟರ ಮೇಲೆಯೇ ಸಾಧನೆಯು ಪೂರ್ಣವಾಗದೆಂದು ಪ್ರಾಣಲಿಂಗಾನುಸಂಧಾನವನ್ನು ಕಲಿಸಿಕೊಟ್ಟನು. ಈ ಮೂಲಕ ಎನ್ನ ಅಂತರಂಗವ ಶುದ್ಧ ಮಾಡಿ (ಭಾವ)ಲಿಂಗೈಕ್ಯದ ದಾರಿಯನ್ನು ಚನ್ನಬಸವಣ್ಣ ತೋರಿದನು.

(ಇಷ್ಟಲಿಂಗವನ್ನು ಕಂಡು ಹಿಡಿದು ಅದರ ಮೂಲಕ ದೃಷ್ಟಿಯೋಗದ ಸಾಧನೆ ಹೇಗೆ ಮಾಡಬೇಕು ಎಂಬುದನ್ನು ತೋರಿಕೊಟ್ಟವರೇ ಗುರು ಬಸವಣ್ಣನವರು. ಅದಕ್ಕಾಗಿಯೇ ಶ್ರೀ ಸಿದ್ಧರಾಮೇಶ್ವರರು "ಬಸವನ ಯೋಗದಿಂ ಹಸನಾಯಿತ್ತೈ ಲೋಕ" ಎಂದು ಹೇಳಿರುವುದು. ಆದರೂ ಗುಣೈಕ ದೃಷ್ಟಿಯಿಂದ ಧರ್ಮಪಿತರು ಚನ್ನಬಸವಣ್ಣನವರನ್ನು ಹೊಗಳುವರು)

ಶರೀರದ ಕಳವಳ, ಕೋಟಲೆ ಹರಿಯಬೇಕಾದರೆ ಕೇವಲ ಪೂಜೆಯಿಂದ ಸಾಧ್ಯವಿಲ್ಲ, ಸೇವೆ (ದಾಸೋಹ)ಯಿಂದ ಮಾತ್ರ ಸಾಧ್ಯ ಎಂದು ಜಂಗಮವಾಗಿ ಬಂದು ಅಲ್ಲಮಪ್ರಭುದೇವರು ಪರಿಪರಿಯಾಗಿ ಕಾಡಿ(ಶಿಕ್ಷಿಸಿ) ಈ ಮೂಲಕ ನನ್ನನ್ನು ರಕ್ಷಿಸಿದರು. ನನ್ನ ವ್ಯವಹಾರದ ಬಂಧನವ ಬಿಡಿಸಿದರು. ಹೀಗಾಗಿ ನಾನು ಪ್ರಭುದೇವರು ಮತ್ತು ಚನ್ನಬಸವಣ್ಣನವರ ಒಡನಾಟದಿಂದ ಪರಿಪೂರ್ಣನಾದೆ. ಈ ಪರಿಪೂರ್ಣತೆಗೆ ಸಾಧನವೆಂದರೆ ಲಿಂಗಾನುಸಂಧಾನ ಮತ್ತು ಸೇವೆ.

1299. ಅನುಭಾವ ಮಾತಿನ ಮಥನವಲ್ಲ

ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು,
ಅನುಭಾವವಿಲ್ಲದ ಲಿಂಗ ಸಮರಸ ಸುಖಕ್ಕೆ ನಿಲುಕದು,
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು,
ಅನುಭಾವವಿಲ್ಲದೆ ಏನನ್ನು ಅರಿಯಬಾರದು.
ತನ್ನಲ್ಲಿ ಸನ್ನಿಹಿತವುಳ್ಳಡೆ ಶರಣರ ಸಂಗವೇತಕ್ಕೆನಲುಂಟೆ?
ಲಿಂಗದೇವಯ್ಯಾ,
ನಿಮ್ಮ ಅನುಭಾವ ಮಾತಿನ ಮಥನವೆಂದು ನುಡಿಯಬಹುದೆ?

ಅನುಭಾವ ಎಂಬ ಪದವನ್ನು ಹಲವಾರು ಅರ್ಥದಲ್ಲಿ ಬಳಸಲಾಗುವುದು. ಒಂದು ಸರಳಾರ್ಥವೆಂದರೆ ಹೃದಯಪೂರ್ವಕ ಅನುಭವದಿಂದ ಯಾವುದನ್ನಾದರೂ ಅನುಭವಿಸುವುದು. ಭಕ್ತಿಯು ಅನುಭಾವ ಸಹಿತವಾಗಿರಬೇಕು ಎಂದರೆ ನಿರ್ಮಲ ಅಂತಃಕರಣದಿಂದ ದೇವರನ್ನು ಪ್ರೀತಿಸುವುದು ಎಂದರ್ಥ. ದೇವರನ್ನು ಕುರಿತು ಉತ್ಕಟ ಪ್ರೀತಿ ಇಲ್ಲದಿದ್ದರೆ ಆ ಆನಂದವನ್ನು ಅನುಭವಿಸಲು ಆಗುವುದಿಲ್ಲ. ಯಾಂತ್ರಿಕ ಪೂಜೆಯನ್ನು ಅಭ್ಯಾಸ ಬಲದಿಂದ ಮಾಡಬಹುದು. ಅದರಿಂದ ಆನಂದಾನುಭೂತಿ ಉಂಟಾಗದು. ಅನುಭಾವದ ಆನಂದದಿಂದ ಪೂಜೆ-ಅನುಸಂಧಾನ ಮಾಡಿದರೆ ಅಪಾರ ಸಂತೃಪ್ತಿ ಉಂಟಾಗುವುದು. ಅದೇ ರೀತಿ ಊಟ ಮಾಡುವುದನ್ನು ಒಂದು ಯಾಂತ್ರಿಕ ಕ್ರಿಯೆಯಾಗಿ ಮಾಡಿದರೆ ಅದರಿಂದ ಹೊಟ್ಟೆ ತುಂಬಬಹುದೇ ವಿನಾ ಸಂತೃಪ್ತಿ ಉಂಟಾಗದು. ಒಂದೊಂದು ತುತ್ತನ್ನೂ ಸ್ವತಃ ಲಿಂಗದೇವನಿಗೇ ಅರ್ಪಿಸುತ್ತಿದ್ದೇನೆ. ಅವನೇ ನನ್ನ ಮೂಲಕ ಉಣ್ಣುತ್ತಿದ್ದಾನೆ ಎಂಬ ತಾದಾತ್ಮ್ಯಭಾವ ಅಳವಡಬೇಕು. ಅನುಭಾವದಿಂದ ಇದು ಸಾಧ್ಯ.

ಅನುಭಾವ ಎಂಬ ಪದಕ್ಕೆ ದಿವ್ಯಾನುಭಾವ (Mystic Experience)ಎಂಬ ಅರ್ಥ ಪ್ರಮುಖವಾದುದು. ಶರಣರ ಸಂಗದಲ್ಲಿ ನಡೆಯುವ ವಿಚಾರ ಮಥನಕ್ಕೆ ಅನುಭಾವ ಎಂಬ ಅರ್ಥವಿದೆ. ಶರಣರ ಒಡನಾಟದಲ್ಲಿ ನಡೆಯುವ ಅನುಭವ ಗೋಷ್ಠಿ ಇಲ್ಲದಿದ್ದರೆ ಏನನ್ನೂ ಅರಿಯಬಾರದು ಎಂದು ಧರ್ಮಪಿತರು ಹೇಳಿದ್ದಾರೆ. ಇವತ್ತು ಲಿಂಗಾಯತರು ತಮ್ಮ ಧರ್ಮದ ತಿಳುವಳಿಕೆ ಹೊಂದಿರದೆ ಇರುವುದಕ್ಕೆ, ಬಹುದೇವತೋಪಾಸಕರು ಆಗಿರುವುದಕ್ಕೆ, ಹೋಮ-ಹವನಗಳನ್ನು ಮಾಡುತ್ತಿರುವುದಕ್ಕೆ ಕಾರಣ ಶರಣರ ಸದ್ಗೋಷ್ಠಿ ನಡೆಸದೇ ಇರುವುದು, ವಚನ ಸಾಹಿತ್ಯದ ಅಧ್ಯಯನ ಮಾಡದೆ ಇರುವುದು. 'ಎಲ್ಲ ಜ್ಞಾನವೂ ಮನುಷ್ಯನಲ್ಲೇ ಇರುವುದು. ಶರಣರ ಸಂಗದ ಆವಶ್ಯಕತೆ ಏನಿದೆ? ಎಂದು ಕೆಲವರು ವಾದಿಸುವುದುಂಟು. ಶರಣರ ಅನುಭಾವ ಗೋಷ್ಠಿ ಯನ್ನು ಕೇವಲ ಮಾತಿನ ಮಂಟಪ ಎಂದು ಹೀಗಳೆಯಲಿಕ್ಕೆ ಬಾರದು; ಅದು ಜ್ಞಾನದ

ಆಗರ, ಅಮೃತ ಸರೋವರ! ಅದರ ಮೂಲಕ ಧರ್ಮದ ಜ್ಞಾನ, ಪರಸ್ಪರರ ಅನುಭವದ ವಿನಿಮಯ!!

1300. ದೈವೀಕರಣ

ಎನ್ನ ಕಾಯದ ಕತ್ತಲೆ ಹಿಂಗಿತ್ತು ಚನ್ನಬಸವಣ್ಣಾ ಇಂದಿನಲ್ಲಿ.
ಎನ್ನ ತನುಮನಧನದ ಲೋಭವಳಿದು ತಳವೆಳಗಾಯಿತ್ತು.
ಚನ್ನಬಸವಣ್ಣಾ ಇಂದಿನಲ್ಲಿ.
ಎನ್ನನೆಡೆಗೊಂಡ ಅಹಂಕಾರ ನಿರ್ವಯಲಾಯಿತ್ತು
ಚನ್ನಬಸವಣ್ಣಾ ಇಂದಿನಲ್ಲಿ.
ಲಿಂಗದೇವರ ತೃಪ್ತಿಯ ತೆರನ ನೀನು ತೋರಿದೆಯಾಗಿ
ನಾನು ಬದುಕಿದೆ ಕಾಣಾ, ಚನ್ನಬಸವಣ್ಣಾ.

ಚನ್ನಬಸವಣ್ಣಾ, ನನ್ನ ಶರೀರ ಗುಣಗಳು ಅಳಿದುಹೋದವು. ನನ್ನ ಶರೀರ, ಮನ, ಧನದ ಲೋಭವಳಿದು ಸರ್ವಾಂಗವೂ ಬದಲಾವಣೆಗೊಂಡಿತು. ನನ್ನಲ್ಲಿ ಉಳಿದಿರಬಹುದಾದ ಅಲ್ಪಸಲ್ಪ ಅಹಂಕಾರವೂ ಅಡಗಿ ಹೋಯಿತು. ಲಿಂಗದೇವನನ್ನು ಹೇಗೆ ತೃಪ್ತಿಪಡಿಸಬೇಕು ಎಂಬುದನ್ನು ನೀನು ಮನವರಿಕೆ ಮಾಡಿಕೊಟ್ಟ ಕಾರಣ ನಾನು ರಕ್ಷಿಸಲ್ಪಟ್ಟೆ.

1301. ತ್ರಿವಿಧ ಲಿಂಗ ಸಂಬಂಧ

ಕಾಣಬಾರದ ಘನವ ಕರಸ್ಥಲದಲ್ಲಿ ತೋರಿದ
ಹೇಳಬಾರದ ಘನವ ಮನಸ್ಥಲದಲ್ಲಿ ತೋರಿದ
ಉಪಮಿಸಬಾರದ ಘನವ ನಿಮ್ಮ ತೃಪ್ತಿಯ ಮುಖದಲ್ಲಿ ತೋರಿದ.
ಇಂತೀ ತ್ರಿವಿಧವು ಏಕಾರ್ಥವಾಗಿಹ ಭೇದವ
ಚನ್ನಬಸವಣ್ಣನು ತೋರಿದನಾಗಿ ಆನು ಬದುಕಿದೆನು
ಕಾಣಾ ಲಿಂಗದೇವಾ.

"ದೇವರು ನಿರಾಕಾರ. ಅಂಥ ಲಿಂಗದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ನನ್ನ ಕರಸ್ಥಲದಲ್ಲಿ ತೋರಿದ. ವರ್ಣಿಸಲು ಅಸಾಧ್ಯವಾದ ದೇವನು ಪ್ರಾಣಲಿಂಗವಾಗಿ ದೇಹದಲ್ಲಿ ನೆಲೆಸಿರುವನು. ಅಂಥ ಆತ್ಮ(ಲಿಂಗ)ವನ್ನು ಮನಸ ಮೂಲಕ ಗ್ರಹಿಸಬೇಕೆಂದು ತೋರಿಸಿಕೊಟ್ಟ. ಉಪಮಿಸಬಾರದ ಘನವೆಂದರೆ ಭಾವಲಿಂಗ ಅದುವೆ ಬ್ರಹ್ಮಾಂಡವನ್ನು ತುಂಬಿರುವ ಮಹಾಲಿಂಗ. ಅದನ್ನು ಭಾವೇಂದ್ರಿಯದಿಂದ ಮಾತ್ರ ಗ್ರಹಿಸಲು ಸಾಧ್ಯ. ತೃಪ್ತಿಯ ಮುಖದಿಂದ ಭಾವಲಿಂಗವನ್ನು ಗ್ರಹಿಸಬೇಕು. ಈ ತ್ರಿವಿಧ ಲಿಂಗಗಳನ್ನು ತ್ರಿವಿಧೇಂದ್ರಿಯದಿಂದ (ಶರೀರ, ಮನ,ಭಾವ) ಗ್ರಹಿಸಿ ಆನಂದಿಸಬೇಕು. ಇದನ್ನು ಚನ್ನಬಸವಣ್ಣ ಅಳವಡಿಸಿಕೊಂಡು ತೋರಿದನಾಗಿ ನಾನು ಬದುಕಿದೆನು." ಎಂದು ಧರ್ಮಪಿತರು ಹೇಳುತ್ತಾರೆ.

1302. ಜನನ-ಮರಣಕ್ಕೆ ಅಂಜದವರು

ಎನಗೆ ಜನನವಾಯಿತ್ತೆಂಬರು, ಎನಗೆ ಜನನವಿಲ್ಲವಯ್ಯಾ;
ಎನಗೆ ಮರಣವಾಯಿತ್ತೆಂಬರು, ಎನಗೆ ಮರಣವಿಲ್ಲವಯ್ಯಾ;
ಜನನವಾದಡೆ ನಿಮ್ಮ ಪಾದೋದಕ ಪ್ರಸಾದವ ಕೊಂಬೆ;
ಮರಣವಾದಡೆ ನಿಮ್ಮ ಶ್ರೀಚರಣವನೆಯ್ದುವೆ
ಬಾವನ್ನದ ವೃಕ್ಷವು ಊರೊಳಗಿದ್ದಡೇನು, ಅಡವಿಯೊಳಗಿದ್ದಡೇನು
ಪರಿಮಳ ಒಂದೆ, ಲಿಂಗದೇವಾ.

ಗುರು ಬಸವಣ್ಣನವರು ದೇವರ ಅನುಗ್ರಹದಿಂದ ಜನನ ಮರಣಗಳನ್ನು ಗೆಲ್ಲಲು ಸಾಧ್ಯ ಎಂದು ಬೋಧಿಸುವುದನ್ನು ಕಂಡು ಕೆಲವು ಟೀಕಾಕಾರರು ಹೀಗೆ ನುಡಿಯುತ್ತಾರೆ : "ದೇವರ ಅನುಗ್ರಹದಿಂದ ಜನನ ಮರಣಗಳನ್ನು ಗೆಲ್ಲಬಹುದು ಎನ್ನುತ್ತಾರೆ. ಅವರೇನು ಗೆದ್ದಿದ್ದಾರೆಯೆ? ಗುರು ಬಸವಣ್ಣನವರಿಗೂ ಪುನಃ ಜನನವುಂಟು, ಮರಣವೂ ಉಂಟು." ಈ ಟೀಕೆಗೆ ಹೀಗೆ ಉತ್ತರವನ್ನು ಕೊಡುತ್ತಾರೆ.

"ನನಗೆ ಪುನಃ ಜನ್ಮವಿದೆ ಎನ್ನುತ್ತಾರೆ. ನನಗೆ ಪುನರ್ಜನ್ಮವಿಲ್ಲ. ನನಗೂ ಮರಣವಿದೆ ಎನ್ನುತ್ತಾರೆ. ನನ್ನದು ಎಲ್ಲರಂತಹ ಮರಣವಲ್ಲ. ಒಂದು ವೇಳೆ ಪುನರ್ಜನ್ಮ ಬಂದಿತು ಎಂದುಕೊಳ್ಳುವ. ಈಗಿನ ಜನ್ಮದ ಪುಣ್ಯದಿಂದ ಮುಂದಿನ ಜನ್ಮದಲ್ಲಿ ಸದ್ಭಕ್ತರ ಮನೆಯಲ್ಲಿ ಹುಟ್ಟಿ ಪಾದೋದಕ-ಪ್ರಸಾದವನ್ನು ಸ್ವೀಕರಿಸುವ ಭಾಗ್ಯಶಾಲಿಯಾಗುತ್ತೇನೆ. ಮರಣವು ಸಂಭವಿಸಿದರೆ ಲಿಂಗದೇವಾ, ನಿಮ್ಮ ಶ್ರೀ ಪಾದದಲ್ಲಿ ಅಡಗುತ್ತೇನೆ. ಶ್ರೀಗಂಧದ ಗಿಡ ಊರೊಳಗಿದ್ದರೇನು, ಅಡವಿಯೊಳಗಿದ್ದರೇನು ಸುವಾಸನೆ ಕೊಡುವುದೇ ಅದರ ಕಾಯಕ. ಹಾಗೆ ನಾನು ಹುಟ್ಟಿದರೆ ಜಗತ್ತಿನಲ್ಲಿ ಲಿಂಗ-ಜಂಗಮದ ಸೇವೆ ಮಾಡುವೆ. ನಿಮ್ಮಲ್ಲಿ ಅಡಗಿದರೆ ಮುಕ್ತನಾಗುತ್ತೇನೆ. ನನಗೆ ಮುಂದಿನ ಚಿಂತೆ ಇಲ್ಲ."

1303. ಶರಣರ ಸಂರಕ್ಷರಣೆ

ಏನಿಲ್ಲದಲ್ಲಿ ಅಶನವಸನಗಳುಂಟೆ?
ಇಲ್ಲದೆ ಬಳಲಿದ ಕಾರಣ
ಲಿಂಗದೇವನ ಶರಣರಿಂದ ಬದುಕಿದೆಯಲ್ಲ ಪ್ರಭುವೆ.

ಶೂನ್ಯ ಪೀಠಾಧೀಶರಾದ ಮೇಲೆ ಒಮ್ಮೆ ಅಲ್ಲಮಪ್ರಭು ಸಂಚಾರ ಹೋಗುತ್ತಾರೆ. ಅಲ್ಲಿಂದ ಬಂದಾಗ ಅಕರಾಳ ವಿಕರಾಳವಾಗಿರುತ್ತಾರೆ. ಯಾರಿಗೂ ಗುರುತು ಹಿಡಿಯಲು ಆಗುವುದಿಲ್ಲ. ಆಗ ಗುರು ಬಸವಣ್ಣನವರು ಗುರುತಿಸಿ, ಕರೆತಂದು ಸ್ನಾನಮಾಡಿಸಿ, ಬಟ್ಟೆ ತೊಡಿಸಿ ಊಟ ಮಾಡಿಸಿ ಉಪಚರಿಸುತ್ತಾರೆ. ಬಹುಶಃ ಆಗ ಹೇಳಿದ ವಚನವಿದ್ದಂತೆ ತೋರುತ್ತದೆ. "ಪ್ರಭುವೆ, ಸರಿಯಾದ ವ್ಯವಸ್ಥೆ ಇಲ್ಲದೆ ನಿನಗೆ ಅಶನ (ಊಟ) ವಸನ (ಬಟ್ಟೆ)ದೊರೆತಿಲ್ಲ. ಬಹಳ ಕಂಗಾಲಾಗಿದ್ದೀಯ, ಬಳಲಿದ್ದೀಯ. ನಮ್ಮ ಶರಣರು ನಿಮಗೆ ಸೂಕ್ತ ಉಪಚಾರ ಮಾಡಿ ರಕ್ಷಿಸುವರು."

ಶೂನ್ಯ ಸಂಪಾದನೆಯ ಈ ಪ್ರಸಂಗ ವಿಲಕ್ಷಣವಾಗಿ ತೋರುವುದು. ಪ್ರಭುದೇವರಂತಹ ದಿವ್ಯ ಜ್ಞಾನಿಗೆ ಅಂಥ ಹೀನ ಸ್ಥಿತಿ ಬರಲು ಸಾಧ್ಯವೇ ಇಲ್ಲ. ಅವರು ಆಶ್ವಾರೂಢರಾಗಿ ಧರ್ಮಬೋಧೆ ಮಾಡುತ್ತ ಸಂಚರಿಸುತ್ತಲಿದ್ದರೆ ಜನರು ತಾವಾಗಿ ದರ್ಶನಕ್ಕೆ ಬರುತ್ತಿರಲು ಸಾಧ್ಯ. ಮಹಾರಾಷ್ಟ್ರದ ಅಲ್ಲಮಗಿರಿಯ ಸುತ್ತ ಪ್ರಭುದೇವರ ಪ್ರಭಾವ ಎಷ್ಟಿದೆ ಎಂದರೆ ಲಿಂಗಾಯತರಷ್ಟೆ ಅಲ್ಲ ಅಧಿಕ ಸಂಖ್ಯೆಯಲ್ಲಿರುವ ಜೈನರು ಸಹ ಪ್ರಭುದೇವರನ್ನು ತಮ್ಮ ಮನೆದೇವರೆಂದು ಆರಾಧಿಸುತ್ತಾರೆ.

1304. ಪ್ರಭುವಿನ ದರ್ಶನ

ಆರತವಡಗಿತ್ತೆನ್ನ ಬಯಕೆ ಸಮನಿಸಿತ್ತೆನ್ನ,
ಸಂಕಲ್ಪ ಸಮನಿಸಿತ್ತೆನ್ನ, ಸ್ವಯವು ದೊರೆಕೊಂಡಿತ್ತೆನ್ನ.
ನಿಮ್ಮ ನೋಡಿ ಎನ್ನ ಕಂಗಳು ಮಂಗಳಮಯದ ಸುಖಸಂಗವಾಯಿತ್ತು.
ಅಯ್ಯಾ, ಒಳಗು ಹೊರಗು, ಹೊರಗೊಳಗೆಂಬುದ ತಿಳಿದು
ಪ್ರಭುವಿನ ಕರುಣದಿಂದ ಲಿಂಗದೇವರಲ್ಲಿ
ತೆರಹಿಲ್ಲದಿರ್ದೆನು.

ಇಲ್ಲಿಯವರೆಗೆ ಇದ್ದ ದಾಹ (ಆರತ)ಅಡಗಿ ಹೋಯಿತು. ನನ್ನ ಬಯಕೆ ಇಂದು

ಪೂರ್ತಿಯಾಯಿತು. ಬಹಳ ವರ್ಷಗಳ ಸಂಕಲ್ಪ ಇಂದು ಪೂರ್ಣಗೊಂಡಿತು. (ಅನುಭವ ಮಂಟಪ ಕಟ್ಟಿ, ಶೂನ್ಯ ಪೀಠವನ್ನು ಸ್ಥಾಪಿಸಿ ಅದನ್ನು ಏರಲು ಸಮರ್ಥನಾದ ಒಬ್ಬ ವ್ಯಕ್ತಿ ಬರಬೇಕೆಂದು ಗುರು ಬಸವಣ್ಣನವರು ಕಾಯುತ್ತಲಿದ್ದರು) ಸಂತೃಪ್ತಿ ಪ್ರಾಪ್ತವಾಯಿತು. ಮಹಾ ಯೋಗಿಯಾದ ನಿಮ್ಮನ್ನು ನೋಡಿ ನನ್ನ ಕಣ್ಣುಗಳು ಆನಂದದಿಂದ ನಲಿದಾಡುತ್ತಲಿವೆ. ನನ್ನ ಒಳ ಹೊರಗೆ ಓತಪ್ರೋತವಾಗಿ ಆನಂದವು ಹರಿದಾಡುತ್ತಲಿದೆ. ಪ್ರಭುದೇವರ ಅನುಗ್ರಹದಿಂದ ಲಿಂಗದೇವನಲ್ಲಿ ಅವಿನಾಭಾವದಿಂದ ಬೆರೆಯುವ ಭಾಗ್ಯ ಒದಗಿದೆ.

1305. ಚನ್ನಬಸವಣ್ಣನವರ ಉಪಕಾರ

ಸಮರತಿ ಸಮಸಂಧಾನದ ಸಂಗ ಸುಖವು
ನಿನ್ನಿಂದಲೆನಗೆ ಸಾಧ್ಯವಾಯಿತ್ತಲ್ಲದೆ,
ಎನಗೆ ತೋರಿದವರಾರು ಹೇಳಾ ಲಿಂಗೈಕ್ಯದ ಹೊಲಬ?
ಲಿಂಗದೇವರ ಶರಣ ಪ್ರಭುದೇವರಲ್ಲಿ
ನೀನೆನ್ನನಿರಿಸದನ್ನಕ್ಕರ, ನಾನು ಬಲ್ಲೆನೆ ಹೇಳಾ?

ಇಷ್ಟಲಿಂಗವನ್ನು ಅಂಗೈಯಲ್ಲಿ ಇಟ್ಟುಕೊಂಡು ದೃಷ್ಟಿಯಿಟ್ಟು ನೋಡುತ್ತ ಹೋಗುವುದು ಸಮ ಸಂಧಾನ. ಇದರಿಂದ ಸಮರಸ (ಸಮರತಿಯ)ದ ಅನುಭವವಾಗುವುದು. ಇದರಲ್ಲಿ ಅದ್ಭುತವಾದ ಸುಖಾನುಭವವಿದೆ. ಈ ಅನುಭವವು ನಿನ್ನಿಂದ ನನಗೆ ಸಾಧ್ಯವಾಯಿತು ಚನ್ನಬಸವಣ್ಣ. ಭಾವಲಿಂಗೈಕ್ಯದ ಹೊಲಬನ್ನು ನನಗೆ ತೋರಿಸಿದವರು ಯಾರು ಹೇಳು? ಲಿಂಗದೇವರ ಶರಣ ಪ್ರಭುದೇವರ ಒಡನಾಟದಲ್ಲಿ ನೀನು ನನ್ನನ್ನು ಇರಿಸದಿದ್ದರೆ ನನಗೆ ಈ ಸಾಧನೆ ಸಾಧ್ಯವಾಗುತ್ತಿತ್ತೆ ಹೇಳು ಚನ್ನಬಸವಣ್ಣ?

1306. ಶರಣರಿಂದ ಪಾವನನಾದೆ

ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು;
ಎನ್ನ ಮನದ ಕರಸ್ಥಲದಲ್ಲಿ ಚನ್ನಬಸವಣ್ಣನ ಕಂಡೆನು;
ಎನ್ನ ಅರಿವಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು.
ಒಳಗು ಹೊರಗು, ಹೊರಗು ಒಳಗೆಂಬ ಭೇದವನರಿಯದೆ ಇದ್ದೆನು.
ಲಿಂಗದೇವಯ್ಯಾ,
ನಿಮ್ಮ ಶರಣರು ಎನ್ನ ಪಾವನವ ಮಾಡಿದ ಪರಿಣಾಮವ
ಅಂತಿಂತೆನಲಮ್ಮದೆ ನಮೋ ನಮೋ ಎನುತ್ತಿರ್ದೆನು.

ನನ್ನ ಶರೀರದ ಕರದಲ್ಲಿ ಇಷ್ಟಲಿಂಗವಿದೆ. ಅದರ ಅನುಸಂಧಾನ ಮಾಡುವಾಗ ಅದರ ಒಳಗೆ ಅಲ್ಲಮಪ್ರಭುದೇವರ ದರ್ಶನವಾಯಿತು. ನನ್ನ ಮನಸ್ಸಿನ ಭಿತ್ತಿಯ ಮೇಲೆ ಚನ್ನಬಸವಣ್ಣನ ದರ್ಶನ ವಾಯಿತು. ನನ್ನ ಜ್ಞಾನದ ಪರದೆಯ ಮೇಲೆ ಮಡಿವಾಳ ಮಾಚಿದೇವರ ದರ್ಶನವಾಯಿತು. ಹೀಗಾಗಿ ನನ್ನ ಹೊರ -ಒಳಗೆಲ್ಲ ಶರಣರೇ ತುಂಬಿದ್ದಾರೆ. ಲಿಂಗದೇವಯ್ಯಾ, ನಿಮ್ಮ ಶರಣರೆಲ್ಲರು ನನ್ನ ಒಳಹೊರಗೆ ಪಾವನ ಮಾಡಿದರು ಇದರ ಪರಿಣಾಮವನ್ನು ವರ್ಣಿಸಲಾರದೆ ಮೌನವಾಗಿ ಅವರಿಗೆ ನಮಿಸುತ್ತಿದ್ದೇನೆ.

1307. ಅಲ್ಲಮ ಪ್ರಭುವಿನ ಸಾಧನೆ

ವೀರ ದನುಜರೆಲ್ಲ ಧಾರುಣಿಯೆಂಬುದರೊಳಗೆ
ಸಾಗರವಾಗಿದ್ದುದನಾರೂ ಅರಿಯರಲ್ಲಾ

ದ್ವಾರಾವತಿಯ ಪುರದೊಳಗೆ ಪರವು ಬಂದಿದ್ದಡೆ
ಶರೀರಸಂಬಂಧವ ಮಾಡಲರಿಯರಲ್ಲಾ
ಕರಗಸವ ಕಳೆದುಕೊಂಡು ಪರಶುರಾಮನ ಗೆಲಿದು
ಸುರರೊಳಗೆ ಸುಳಿದಾಡಲರಿಯರಲ್ಲಾ.
ವಾರುಧಿಯನೇರಿಕೊಂಡು ಮರಣವೆಂಬುದ ನಿಲಿಸಿ
ತ್ರಿಪುರವ ಮೂರ್ತಿಗೊಳಿಸಲರಿಯರಲ್ಲಾ.
ಮೇರುವೆಂಬುದ ಹೊಕ್ಕು ನೂರೆಂಟನೆಣಿಸಿಕೊಂಡು
ನಿರಾಕಾರದಲಡಗುವರಿನ್ನಾರು ಹೇಳಾ?
ಸಾಸಿರದ ಮೇಲೆ ನೂರೆಂಭತ್ತೆಂಟು ರಾಶಿ
ಪರುಷವೇದಿಗಳಾಗಲರಿಯರಲ್ಲಾ
ಲಿಂಗದೇವನ ಶರಣರ ಸಂಬಂಧವು
ಪ್ರಭುವಿಂಗಲ್ಲದೆ ಮತ್ತಾರಿಗೆಯೂ ಅಳವಡದು.

ವೀರರು, ರಾಕ್ಷಸರು ಮುಂತಾದ ಎಲ್ಲರೂ ಈ ಜಗತ್ತೆಂಬ ಸಾಗರದಲ್ಲಿ ಮುಳುಗಿ ತೇಲುತ್ತಿದ್ದಾರೆ. ದ್ವಾರಾವತಿಯ ಪುರದೊಳಗೆ ಅಂದರೆ ಶರೀರದೊಳಗೆ ಆತ್ಮ ಎಂಬ ಪರಮಾತ್ಮನ ಅಂಶವು ನೆಲೆಸಿದ್ದರೂ ಅದನ್ನು ಶರೀರದ ಮೂಲಕ ಹೇಗೆ ಸಂಬಂಧಿಸಿಕೊಳ್ಳಬೇಕು ಎಂಬುದನ್ನು ಅರಿಯರು, ಕೋಪ ಎಂಬುವ ಕರಗಸವನ್ನು ತೊರೆದು ಉದ್ವೇಗ ಎಂಬ ಪರಶುರಾಮನ ಗೆಲಿದು ದೇವತೆಗಳಾಗಿ ಸುಳಿದಾಡಲು ಅರಿಯರು. ಶರೀರವ ಏರಿಕೊಂಡು ಮರಣವೆಂಬುದನ್ನು ಗೆದ್ದು ತ್ರಿಪುರ ತತ್ವಗಳನ್ನು ದೇಹದಲ್ಲಿ ಅಳವಡಿಸಲು ತಿಳಿಯರು. ಸ್ಥೂಲ ಶರೀರದಲ್ಲಿ ಕಾರ್ಮಿಕ ಮಲವೆಂಬ ಅಸುರ, ಸೂಕ್ಷ್ಮ ಶರೀರದಲ್ಲಿ ಮಾಯಾ ಮಲವೆಂಬ ಅಸುರ, ಕಾರಣ ಶರೀರದಲ್ಲಿ ಆಣವ ಮಲವೆಂಬ ಅಸುರ ನೆಲೆಸಿದ್ದು ಇವನ್ನು ಸಾಧನೆಯಿಂದ ನಾಶಮಾಡಿ ಸ್ಥೂಲಶರೀರದಲ್ಲಿ ಇಷ್ಟಲಿಂಗವನ್ನು ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗವನ್ನು, ಕಾರಣ ಶರೀರದಲ್ಲಿ ಭಾವಲಿಂಗವನ್ನು ಸ್ಥಾಪಿಸಲು ಬಹಳ ಜನರು ಅರಿಯರು. ಮೇರುದಂಡ ಎನ್ನಿಸಿಕೊಂಡ ಬೆನ್ನು ಹುರಿಯನ್ನು ಹೊಕ್ಕು ನೂರೆಂಟು ಹಂತವ ದಾಟಿ ನಿರಾಕಾರವಾದ ಚೈತನ್ಯದಲ್ಲಿ ಅಡಗುವವರು ಎಷ್ಟು ಜನ ಸಾವಿರ ದಳದ ಕಮಲವಾದ ಸಹಸ್ರಾರು ಚಕ್ರವನ್ನು ದಾಟಿ ಪರುಷಮಯ ವ್ಯಕ್ತಿತ್ವವನ್ನು ಹೊಂದಲರಿಯರಲ್ಲ. ಲಿಂಗದೇವನ ಶರಣರು ಇಂಥ ಎಲ್ಲ ಅದ್ಭುತ ಸಾಧನೆಯನ್ನು ಮಾಡುವರು. ಇದನ್ನು ಅರಿಯಲು ಪ್ರಭುದೇವರಂಥವರಿಗೆ ಸಾಧ್ಯವೇ ವಿನಾ ಬೇರಾರಿಗೂ ಸಾಧ್ಯವಾಗದು.

1308. ಪ್ರಭುದೇವರಿಗೆ ನಮನ

ಆದಿಯನರುಹಿದ, ಅನಾದಿಯ ತೋರಿದ
ಇಹವ ಕೆಡಿಸಿದ, ಪರವ ನಿಲಿಸಿದ, ಘನವ ತೋರಿದ
ಮನವ ಸರಿಸವಿಟ್ಟು ಅನುವ ತೋರಿ ಆಯತವ ಮಾಡಿ
ತನುವ ಮರೆಸಿ ಮಹವನರುಪಿದ
ಹಿಂದಣ ಪೂರ್ವಾಶ್ರಯವ ಹಿಂದು ಮಾಡಿ ತೋರಿ
ಮುಂದಣ ಗತಿಯ ಸಂದೇಹವ ಬಿಡಿಸಿದ
ಲಿಂಗದೇವರಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತ್ತಿರ್ದೆನು.

ನಾನು ಜಗತ್ತಿಗೆ ಬಂದ ಉದ್ದೇಶವೇನು ಎಂಬುದನ್ನು ನನಗೆ ತಿಳಿಸಿಕೊಟ್ಟ. ಅನಾದಿಯಾದ ಪರಮಾತ್ಮನ ಸ್ವರೂಪವನ್ನು ಮನವರಿಕೆ ಮಾಡಿಕೊಟ್ಟ. ಐಹಿಕವಾದ ಆಕಾಂಕ್ಷೆಗಳನ್ನು ನಾಶ

ಮಾಡಿದ. ಪಾರಲೌಕಿಕ ಮೌಲ್ಯಗಳಲ್ಲಿ ಶ್ರದ್ಧೆಯನ್ನು ಬೆಳೆಸಿದ; ಘನ ಚೈತನ್ಯವಾದ ಪರಮಾತ್ಮನ ಸ್ವರೂಪವನ್ನು ತಿಳಿಸಿದ. ಅತ್ತಿತ್ತ ಹರಿವ ಮನವ ಸಮಸ್ಥಿತಿಗೆ ತಂದು, ಅದನ್ನು ಸಂಸ್ಕರಿಸಿ, ಅದರಲ್ಲಿ ಲಿಂಗ-ಆಯತವ ಮಾಡಿ, ಶರೀರ ಗುಣಗಳನ್ನು ಕಳೆದು ಮಹತ್ತರವಾದ ಅನುಭಾವವನ್ನು ಅರುಹಿದ. ನಾನು ಹುಟ್ಟಿ ಬಂದುದು ಸಾಮಾನ್ಯ ಮಾನವನಾಗಿ ಅಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟು, ಮುಂದೆ ಸಾಧಿಸಬಹುದಾದುದನ್ನು ತಿಳಿಸಿಕೊಟ್ಟನು. ಲಿಂಗದೇವರಲ್ಲಿ ಪ್ರಭುದೇವರ ಶ್ರೀ ಪಾದಕ್ಕೆ ನಾನು ನಮೋ ನಮೋ ಎನುತಿರ್ದೆನು.

1309. ಅಲ್ಲಯ್ಯನ ಪ್ರಭೆ ಅದ್ಭುತ

ಆದಿಯ ಲಿಂಗವ ತಂದಾತನಲ್ಲಯ್ಯನು
ಅನಾದಿಯ ಲಿಂಗವ ತಂದಾತನಲ್ಲಯ್ಯನು.
ಭಾಪುರೆ ಜಂಗಮವೆ, ನಿರ್ವಯಲನವಗ್ರಹಿಸಿದಿರಿ.
ನಿಮಗೋಸುಗ ಮಾಡುವ ಸಯದಾನವನು
ನಡೆಗಟ್ಟು ಮಾಡುವೆನು, ನುಡಿಗೆಟ್ಟು ಮಾಡುವೆನು
ಸರ್ವಕುಳಕ್ಕೆ ನೀನೆಂದು ಅಲ್ಲಮಯ್ಯನ ಪ್ರಸಾದಕ್ಕೆ ಕೈಯಾನುವೆನು.
ನವಬ್ರಹ್ಮರ ಕೇರಿಯೊಳಗೆ ಅಲ್ಲಯ್ಯನ ಪ್ರಭೆ.
ರುದ್ರಭೂಮಿಯೊಳಗೆ ಅಲ್ಲಯ್ಯನ ಪ್ರಭೆ.
ಸಯದಾನವಿಲ್ಲದಡೆ ಎನ್ನ ನೀಡುವೆನು ಲಿಂಗದೇವಯ್ಯ

ಆದಿಯ ಲಿಂಗ ಎಂದರೆ ಇಷ್ಟಲಿಂಗ. ಅನಿಮಿಷಯೋಗಿಯಿಂದ ಇಷ್ಟಲಿಂಗವನ್ನು ತೆಗೆದುಕೊಂಡಾತ ಅಲ್ಲಯ್ಯನು. ಅನಾದಿ ಸ್ವರೂಪನಾದ ದೇವನನ್ನು ಅರಿತವನು ಅಲ್ಲಯ್ಯನು. ಭಲೇ! ಜಂಗಮ ಮೂರ್ತಿಯೆ ನಿರ್ವಯಲ ಸ್ವರೂಪನಾದ ದೇವನ ಮಹಿಮೆಯನ್ನು ತಿಳಿಸಿಕೊಟ್ಟಿರಿ. ನಿಮಗೋಸ್ಕರ ನಾನು ಯಾವ ತ್ಯಾಗವನ್ನು ಸಹ ನಾನು ಎಲ್ಲೆ ಮೀರಿ ಮಾಡುವೆ. ನಡೆಗೆಟ್ಟು ಅಂದರೆ ಸಂಪ್ರದಾಯವನ್ನು ಮೀರಿ ನುಡಿಗೆಟ್ಟು ಅಂದರೆ ಲೋಕಿಕದ ಮಾತನ್ನು ಮೀರಿ ಈ ವಿಷಯದಲ್ಲಿ ನಡೆಯುವೆ. ಸರ್ವ ಸಾಧನೆಗೆ ನೀವೇ ಮಾರ್ಗದರ್ಶಕರೆಂದು ನಿಮ್ಮ ಪ್ರಸಾದಕ್ಕೆ ಕೈಚಾಚುವೆ; ನಿಮ್ಮ ನುಡಿ ಪ್ರಸಾದ (ವಾಣಿ)ಕ್ಕೆ ತಲೆ ಬಾಗುವೆ.

1310. ಪ್ರಭುದೇವರ ನಿಲುವು ಅದ್ಭುತ

ರೂಪು ಅರೂಪಿನಲ್ಲಿ ನಿಂದಿತ್ತು.
ಅರೂಪು ನಿಜರೂಪವನವಗ್ರಹಿಸಿತ್ತು
ನಿಜರೂಪು ನಿರ್ಣಯದಲ್ಲಿ ನಿಷ್ಪತ್ತಿಯಾಯಿತ್ತು.
ನಿಷ್ಪತ್ತಿಯಾದ ನಿಜ ಶರಣರ ನಿಲವು
ಕಾಯವಿಡಿದು ಕಂಡೆಹೆನೆಂದಡೆ ಕಾಣಬಹುದೆ?
ಲಿಂಗದೇವರ ಶರಣ ಪ್ರಭುದೇವರ ನಿಲವು
ಎನಗೆ ಸಾಧ್ಯವಪ್ಪುದೆ?

ಪ್ರಭುದೇವರು ಒಂದು ರೂಪದಲ್ಲಿ ಕಾಣಬಹುದು. ಆದರೆ ಅವರು ಆ ರೂಪವನ್ನು ಮೀರಿ ಶೂನ್ಯ ಕಾಯದವರಾಗಿದ್ದಾರೆ. ಅವರ ನಿರ್ವಯಲ ರೂಪವು ಪರಮಾತ್ಮನ ನಿಜರೂಪವನ್ನು ಗ್ರಹಿಸಿತು. ಅವರು ನಿಷ್ಪತ್ತಿಯಾಗಿ ನಿಂತ ಶರಣರ ವ್ಯಕ್ತಿತ್ವವನ್ನು ಶರೀರಧಾರಿಗಳಾದ ಸಾಮಾನ್ಯ ಮಾನವರು ಅರ್ಥಮಾಡಿಕೊಳ್ಳಲು ಸಾಧ್ಯವೆ? ಲಿಂಗದೇವರ ಶರಣ ಪ್ರಭುದೇವರ ನಿಲುವನ್ನು ನನಗೆ ಅರ್ಥಮಾಡಿಕೊಳ್ಳುಲು ಸಾಧ್ಯವಾಗುವುದೆ?

1311. ಶರಣರ ಸಂಗ

ಅಯ್ಯಾ, ನಿಮ್ಮ ಮಹಾನುಭಾವಿಗಳ ಸಂಗದಿಂದೆನ್ನ ತನು ಶುದ್ಧವಾಯಿತ್ತು.
ಮನ ಶುದ್ಧವಾಯಿತ್ತು. ಧನ ಶುದ್ಧವಾಯಿತ್ತು,
ಎನ್ನ ಸರ್ವಾಂಗ ಶುದ್ಧವಾಯಿತ್ತು.
ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಾಯಿತ್ತು.
ಲಿಂಗದೇವಾ,
ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ
ಎನಗೊದಗಿದ ಘನವನೇನೆಂದುಪಮಿಸುವೆ?

ಲಿಂಗದೇವಾ, ನಿಮ್ಮ ಮಹಾನುಭಾವವನ್ನು ಪಡೆದುಕೊಂಡ ಶರಣರ ಒಡನಾಟದಿಂದ ಶರೀರ ಶುದ್ಧವಾಯಿತು. ಅವರನ್ನು ನೋಡಿ, ಅನುಕರಿಸಿ, ಸದಾಚಾರವನ್ನು ಅಳವಡಿಸಿಕೊಳ್ಳುವುದರಿಂದ ಶರೀರವು ಶುದ್ಧವಾಗುವುದು. ಅವರನ್ನು ನೋಡಿ ಲಿಂಗನಿಷ್ಠೆಯನ್ನು ಅಳವಡಿಸಿಕೊಳ್ಳುವುದರಿಂದ ಮನಸ್ಸು ಶುದ್ಧವಾಗುವುದು. ಅವರಿಗಾಗಿ ವಿನಿಯೋಗಿಸುವುದರಿಂದ ನನ್ನ ಗಳಿಕೆ ಶುದ್ಧವಾಗುವುದು. ಶರಣರ ಒಡನಾಟದಿಂದ ಸರ್ವಾಂಗವು ಶುದ್ಧವಾಯಿತು. ಆಲಿಕಲ್ಲಿನ ಗೊಂಬೆಯನ್ನು ಅಪ್ಪಿಕೊಂಡಂತೆ ಆಯಿತು. ಲಿಂಗದೇವಾ, ನಿಮ್ಮ ಶರಣ ಪ್ರಭುದೇವರ ಅನುಗ್ರಹದಿಂದ ನನಗೆ ಒದಗಿದ ಘನವಾದ ವ್ಯಕ್ತಿತ್ವವನ್ನು ಹೇಗೆ ತಾನೆ ಬಣ್ಣಿಸಲಿ?

1312. ಪೂರ್ವಾಚಾರಿ ಸಂಗನ ಬಸವಣ್ಣ

ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ಪೂರ್ವಾಚಾರಿಯಾದೆನಯ್ಯಾ,
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ವೃಷಭನಾದೆನಯ್ಯಾ.
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು ಸಂಗನಬಸವಣ್ಣನಾಗಿ,
ಗುಹೇಶ್ವರನ ಶರಣನ ಮಹಾ ಬಸುರೊಳಗೆ ಕಂದನಾಗಿರ್ದೆ
ಕಾಣಾ, ಲಿಂಗದೇವಾ!

ಲಿಂಗದೇವಾ, ನಿರಾಕಾರನಾದ ನಿನಗೆ ವಿಶ್ವದಾಕಾರ ಕೊಟ್ಟು ಇಷ್ಟಲಿಂಗವಾಗಿ ಮಾಡಿ ಜಗತ್ತಿಗೆ ಕೊಟ್ಟ ಕಾರಣದಿಂದ ನಾನು ಪೂರ್ವಾಚಾರಿ (ಆದಿಗುರು) ಎನ್ನಿಸಿಕೊಂಡೆ. ಇತಿಹಾಸ[illegible] ಅತ್ಯಂತ ಪ್ರಿಯನಾದವನು ವೃಷಭನಾಥ, ನಂದೀಶ್ವರ. ಅವನ ಅವತಾರ ಎಂದು ನಾ[illegible] ಜನರಿಂದ ಹೊಗಳಿಸಿಕೊಂಡದ್ದು ನಿನ್ನನ್ನು ಸಾಕಾರಗೊಳಿಸಿ ಪೂಜಿಸಿದ್ದಕ್ಕೆ. ಇದೇ ಕಾರಣಕ್ಕೆ ನಾನು ಸಂಗನ ಬಸವಣ್ಣ ಎಂಬ ಖ್ಯಾತಿ ಪಡೆದೆ. ಇದರಿಂದ ಗುಹೇಶ್ವರನ ಶರಣ ಅಲ್ಲಮಪ್ರಭುಗಳಿಗೆ ಪ್ರೀತಿಪಾತ್ರನಾಗಿ ಅವರ ಕಂದ ಎನ್ನಿಸಿಕೊಳ್ಳುವವನಾದೆ.

1313. ಬಸವಣ್ಣನ ಇಷ್ಟಲಿಂಗ ಪ್ರಭುದೇವರ ಬಳಿ?

ಶಾಂತಿಯ ಮಾಡಹೋದಡೆ ಬೇತಾಳವಾಯಿತ್ತಯ್ಯಾ
ಸೀತಾಳದಾಪ್ಯಾಯನವಾಯಿತ್ತೆಂದಡೆ
ಪರಹಿತಾರ್ಥವೆಂದು ತೋರಿದೆನೆನ್ನ ಪ್ರಾಣಲಿಂಗವನು.
ನೇಮವ ಮಾಡಲೆಂದು ಕೊಟ್ಟಡೆ
ಕೊಂಡೋಡಿಹೋದನು ಅನಿಮಿಷನು.
ಅಭವನ ಮಹಾಮನೆಯ ಹೊಕ್ಕಡೆ ಇರಿಸಿದನೆ ಲಿಂಗವ?

ಅರಸೆಂದು ತಾನೆ ಸ್ವತಂತ್ರನು
ಎನಗೆ ಹೇಯವನೊಡ್ಡಿ ಅರಸೆಂದು ಕಳುಹಿದನು.
ಅಳಲಿ ಬಳಲಿ ತೊಳಲಿ ಆಡಿ ಹಾಡಿ ಹಂಬಲಿಸಿ
ಅನಂತ ಅವಸ್ಥೆಯಿಂದ
ಲಕ್ಷದ ಮೇಲೆ ತೊಂಬತ್ತಾರು ಸಾವಿರ ವಚನವ ಹಾಡಿ
ಆಚಾರ ವಿಚಾರದಿಂದ
ವಿಚಿತ್ರನಭಯವ ಕೊಟ್ಟು ಕಳುಹಿದನಯ್ಯಾ
ಗುಹೇಶ್ವರನ ಶರಣ ತೋರಿದಡರಿದೆನು
ಲಿಂಗದೇವರ.

ಶಾಂತಿಯನ್ನು ಮಾಡಲು ಹೋದರೆ ಆ ದೇವತೆ ಬೇತಾಳದ ರೂಪ ಪಡೆದಂತೆ ಆಯಿತು. ಬಾಯಾರಿದವರಿಗೆ ನೀರನ್ನು (ಸೀತಾಳ)ಕೊಡಬೇಕು ಎಂಬ ಉದ್ದೇಶವನ್ನು ಹೊಂದಿ, ಪರೋಪಕಾರ ಎಂದು ನನ್ನ ಪ್ರಾಣಲಿಂಗವನ್ನು ದರ್ಶನ ಮಾಡಿಸಿದೆ. ತನ್ನ ಪೂಜೆಯ ನೇಮವನ್ನು ಪೂರ್ತಿ ಮಾಡಲೆಂದು ನನ್ನ ಇಷ್ಟಲಿಂಗವನ್ನು ಕೊಟ್ಟರೆ ಅದನ್ನು ತೆಗೆದುಕೊಂಡು ಅನಿಮಿಷನು ಓಡಿ ಹೋದನು. ಪರಮಾತ್ಮನ ಮಹಾಮನೆ (ಗವಿ)ಯನ್ನು ಹೊಕ್ಕು ಅಂಗೈಯಲ್ಲಿ ಇಷ್ಟಲಿಂಗವನ್ನು ಇರಿಸಿಕೊಂಡನು. ನಾನು ಆ ಇಷ್ಟಲಿಂಗವನ್ನು ಹುಡುಕಿ ಸೋತೆ. ಆ ಇಷ್ಟಲಿಂಗಕ್ಕೆ ಅಳಲಿ, ಬಳಲಿ, ತೊಳಲಿ, ಆಡಿ, ಹಾಡಿ, ಹಂಬಲಿಸಿ ಅನಂತ ಅವಸ್ಥೆ ಪಟ್ಟೆ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ವಚನಗಳನ್ನು ಹಾಡಿದೆ, ಆಚಾರ–ವಿಚಾರ ಸಂಪನ್ನನಾದೆ. ಈಗ ಗುಹೇಶ್ವರನ ಶರಣ ಅಲ್ಲಮ ಪ್ರಭುದೇವರು ತೋರಿಸಿದಾಗ ನಾನು ಇದೇ ನನ್ನ (ಕೈಬಿಟ್ಟು ಹೋದ) ಇಷ್ಟಲಿಂಗ ಎಂದು ಅರಿತುಕೊಂಡೆನು.

ಇದು ಅತ್ಯಂತ ಮಹತ್ವಪೂರ್ಣ ವಚನ. ಗುರು ಬಸವಣ್ಣನವರು ಪ್ರಾಣಲಿಂಗದ ಕುರುಹಾಗಿ ಪಂಚಸೂತ್ರ ಲಿಂಗವನ್ನು ಮಾಡಿ, ಪರಮಾತ್ಮನ ಕುರುಹಾಗಿ ಗೋಳಾಕಾರದ ಕಂತೆಯನ್ನಿಟ್ಟು ಇಷ್ಟಲಿಂಗವನ್ನು ರೂಪಿಸಿ ಇಟ್ಟುಕೊಂಡು ಒಂದು ದಿನ ಧ್ಯಾನಾಸಕ್ತರಾಗಿ ಕುಳಿತಾಗ ಇಂದು ದಿವ್ಯವಾದ ಬೆಳಕು ಅದರಲ್ಲಿ ಅವತೀರ್ಣವಾಯಿತು. ಆ ಅಮೂಲ್ಯ ಇಷ್ಟಲಿಂಗವನ್ನು ತಾವು ಧರಿಸಿಕೊಂಡರು. ನಂತರ ಬಿಜ್ಜಳನಲ್ಲಿ ಅಧಿಕಾರವನ್ನು [illegible] ಪ್ರಾಂತ್ಯದಲ್ಲಿ [illegible] ಕಲ್ಲಿನ ಯುವರಾಜನಾದ ವಸುಧೀಶ ಭೂಪಾಲ ಬೇಟೆಯ [illegible]ಯಾಲಿಯಿಂದ ಮಲೆನಾಡಿನ ಕಾಡಿಗೆ ಬಂದನು. ಲಿಂಗದರ್ಶನವಿಲ್ಲದೆ ನೀರನ್ನೂ ಕುಡಿಯುವುದಿಲ್ಲ ಎಂಬ ನೇಮವನ್ನು ಹೊಂದಿದ್ದ ವಸುಧೀಶ ಕಾಡಿನಲ್ಲಿ ಎಲ್ಲೂ ಶಿವ ದೇವಾಲಯವಿಲ್ಲದ ಕಾರಣ ಆಹಾರ ನೀರನ್ನು ಮುಟ್ಟದೆ ಬಳಲಿದ್ದ. ಆಗ ಸಂಚರಿಸುತ್ತಿದ್ದ ಗುರು ಬಸವಣ್ಣನವರು ತಮ್ಮ ಇಷ್ಟಲಿಂಗವನ್ನು ದರ್ಶನ ಮಾಡಿಸಿದರಲ್ಲದೆ ಅದನ್ನು ಪೂಜಿಸಿ ನೇಮ ಪೂರೈಸಲು ಅನುವು ಮಾಡಿಕೊಟ್ಟರು. ಅದನ್ನು ಪಡೆದುಕೊಂಡು ವಸುಧೀಶ ವಾಪಸ್ಸು ಕೊಡಲು ನಿರಾಕರಿಸಿದ್ದಲ್ಲದೆ ತೆಗೆದುಕೊಂಡು ಕಣ್ಮರೆಯಾದಂತೆ (ಕೊಂಡೋಡಿ ಹೋದನು ಅನಿಮಿಷನು) ತೋರುತ್ತದೆ. ಅದು ಎಲ್ಲಿ ಹೋಯಿತು ಎಂದು (ಗುರು ಬಸವಣ್ಣನವರು ತಾವು ಇನ್ನೊಂದು ಲಿಂಗವನ್ನು ಧರಿಸಿಕೊಂಡು) ಅಂದಿನಿಂದಲೂ ಹುಡುಕುತ್ತಲೇ ಇದ್ದರು. ಅದೀಗ ಪ್ರಭುದೇವರ ಕೈಯಲ್ಲಿ ಇರುವುದನ್ನು ನೋಡಿ ವಿಸ್ಮಿತರಾಗಿದ್ದಾರೆ.

1314. ಭಾವ ನಿರ್ಭಾವವ ಮೀರಿದ ಶರಣ

ಕಂಗಳಲ್ಲಿ ಕರಸ್ಥಲದ ನೋಟ; ಅಂಗವಿಕಾರವೆಂಬುದನರಿಯ ನೋಡಾ!
ಮನದ ಕೊನೆಯ ಮೊನೆಯ ಮೇಲಣ ಅನುಭಾವ ಗಮನಗೆಟ್ಟು

ಭಾವ ನಿರ್ಭಾವವೆಂಬುದನರಿಯ ನೋಡಾ!
ಲಿಂಗದೇವರಲ್ಲಿ
ಪ್ರಭುದೇವರಿಂದಲಾನು ಬದುಕಿದೆನು ಕಾಣಾ, ಚನ್ನಬಸವಣ್ಣಾ

ಇಷ್ಟಲಿಂಗವನ್ನು ದೃಷ್ಟಿಸುತ್ತಿದ್ದಾರೇನೋ ಎಂಬಂತೆ ಅರೆತೆರೆದ ಕಣ್ಣುಗಳ ನೋಟ. ಶರೀರದಲ್ಲಿ ಯಾವ ಬಗೆಯ ವಿಕಾರವೂ ಇಲ್ಲ. ಮನದ ಕೊನೆಯ ಮೊನೆಯ ಮೇಲೆ ದಿವ್ಯ ಅನುಭಾವ. ಈ ಅನುಭಾವವನ್ನು ದಾಟಿ ಭಾವಾತೀತರಾಗಿದ್ದಾರೆ. ನಿರ್ಭಾವದ ಸ್ಥಿತಿಯನ್ನೂ ದಾಟಿದ್ದಾರೆ. ಇಂಥ ಪ್ರಭುದೇವರಿಂದ ನಾನು ರಕ್ಷಿಸಲ್ಪಟ್ಟೆ ಚನ್ನಬಸವಣ್ಣ.

1315. ಪ್ರಭುದೇವರ ಉನ್ಮನಿಯ ಸ್ಥಿತಿ

ಮರುಗದ ಗಿಡುವಿನಂತೆ ಹುಟ್ಟುತ್ತಲೇ ಪರಿಮಳ
ಎರವಿನ ಬಣ್ಣದೊರೆಗೆಡಿಸಿದ ಪರಿಯ ನೋಡಾ
ಹರನ ಪ್ರೇರಣೆಯೊಳಗೆ ಹಿರಿದೊಂದು ವಾರಿಧಿ.
ವಾರಿಧಿಯೊಳಗಣ ಕಮಲ ಬಾಡಿ.
ಕಮಲದೊಳಗೆ ಸುಳಿವ ಭ್ರಮರನ ಪಕ್ಕ ಮುರಿದು ಉರುಳಿದಡೆ
ನಿರಂಜನವಾಯಿತ್ತು ನೋಡಾ.
ಹರಿಗೊಯಿದ ಮಿಂಚಿನ ಗೊಂಚಲ ನೆರವೋತು
ಇಂದುಕೋಟಿಪ್ರಭೆಯ ಶಾಂತಿಯನೊಳಕೊಂಡು
ಲಿಂಗದೇವರ ನೆರವೋತ ಪ್ರಭುದೇವರ ಶ್ರೀಪಾದದಲ್ಲಿ
ಭೃಂಗನಾಗಿ ಬದುಕಿದೆನು.

ಮರುಗದ ಗಿಡದಂತೆ ಹುಟ್ಟುತ್ತಲೇ ಪರಿಮಳ ಬೀರಿದ ಸಿದ್ಧಪುರುಷ. ಹಾಕಿದ ಬಣ್ಣದಂತೆ ವೇಷಧಾರಿಗಳಾದ ಡಾಂಭಿಕರ ಬಣ್ಣವನ್ನು ಬಯಲಿಗೆಳೆದ ಮಹಾನುಭಾವ. ಹರನ ಲೀಲೆ ಎಂಬಂತೆ ಈ ಜಗತ್ತು ಒಂದು ಸಮುದ್ರ(ವಾರಿಧಿ)ದಂತೆ. ಇದರೊಳಗೆ ಸಂಸಾರದಾಸಕ್ತಿ ಎಂಬ ಕಮಲ ಅರಳುತ್ತದೆ. ಈ ಸಂಸಾರಾಸಕ್ತಿ ಎಂಬ ಕಮಲದಲ್ಲಿ ಸುಳಿವ ಭ್ರಮರವೆಂದರೆ ವ್ಯಾಮೋಹ. ಸಂಸಾರಾಸಕ್ತಿ ಎಂಬ ಕಮಲಬಾಡಿ, ವ್ಯಾಮೋಹವು ಅಳಿದರೆ ಆಗ ನಿರಂಜನತ್ವ ಅಳವಡುವುದು ಮಿಂಚಿನ ಗೊಂಚಲಂತಹ ಅನುಭವ ಪಡೆದು, ಕೋಟಿ ಚಂದ್ರರ ಪ್ರಭೆ ಮತ್ತು ಶಾಂತಿಯನ್ನು ಒಳಗೊಂಡು ಲಿಂಗದೇವನಲ್ಲಿ ಬೆರೆದ ಪ್ರಭುದೇವರ ಶ್ರೀಪಾದದಲ್ಲಿ ನಾನು ದುಂಬಿಯಾಗಿರುವೆನು

1316. ದಿವ್ಯಾನುಭಾವಿ ಅಲ್ಲಮಪ್ರಭು

ಬಟ್ಟ ಬಯಲಲ್ಲಿ ಒಂದು ತಲೆಯಿಲ್ಲದ ಆನೆಯಿದ್ದಿತ್ತು.
ಆನೆ ಬಂದು ಆನೆಯ ನುಂಗಿ ತಾನೆ ಅಳಿಯಿತ್ತು.
ಅಂತರವಿಲ್ಲದ ಒಳಗು, ಅವಲಂಬವಿಲ್ಲದ ಹೊರಗು ನೋಡಾ,
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು
ಮೂರ್ತಿಗೊಂಡು,
ವಿಚಿತ್ರವಾಯಿತ್ತು ಜಗವೆಲ್ಲ
ಲಿಂಗದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ
ಆನು ನಮೋ ನಮೋ ಎಂಬೆನು.

ಬಟ್ಟ ಬಯಲು ಅಂದರೆ ಚಿದಾಕಾಶ, ಕುಂಭಿನಿ ಸರಸಿ. ಇದು ಮೆದುಳಿನ ಒಳಗೆ ಇರುವ ಚಿದ್ರಸವನ್ನು ತುಂಬಿಕೊಂಡಿರುವ ಪೊಳ್ಳು, ಇಲ್ಲಿ ಸಂಗ್ರಹವಾಗಿರುವ ಚಿದ್ರಸವೇ ತಲೆ ಇಲ್ಲದ ಆನೆ

ಸಾಧನೆ ತೀವ್ರವಾದಾಗ ಇದು ಕೆಳಗೆ ಧಾರೈಸುತ್ತದೆ. ಅಮೃತ ಬಿಂದೂ ಎಂದು ಇದನ್ನು ಕರೆಯಲಾಗುವುದು. ಇದು ಹೃದಯ ಕಮಲವನ್ನು ಪ್ರವೇಶಿಸಿದಾಗ ಅಪಾರ ಆನಂದವಾಗುವುದು. ಹೃದಯ ಕಮಲದಲ್ಲಿ ಅಡಗಿರುವ ಜೀವಾತ್ಮವನ್ನು ಈ ಅಮೃತಧಾರೆ ನುಂಗಿ ಹಾಕುವುದು. ದಿವ್ಯಾನುಭಾವವು ಪ್ರಭುದೇವರ ಅಂತರಂಗ, ಬಹಿರಂಗಗಳನ್ನೆಲ್ಲ ಆವರಿಸಿಕೊಂಡಿದೆ. ದಳವಿಲ್ಲದ ಕುಸುಮವಾದ ಶಿಖಾಚಕ್ರದಲ್ಲಿ ಪ್ರಭುದೇವರ ಪ್ರಾಣ(ಸಮಾಧಿ ಸ್ಥಿತಿಯಲ್ಲಿ) ನೆಲೆ ನಿಂತಿದೆ. ಶರೀರ ಪ್ರಜ್ಞೆಯಳಿದುಕೊಂಡ ಪ್ರಭುದೇವರು ಜಗತ್ತಿಗೆ ಒಂದು ವಿಸ್ಮಯ. ಇಂಥ ಪ್ರಭುದೇವರ ಶ್ರೀಪಾದಕ್ಕೆ ನಾನು ನಮಿಸುತ್ತೇನೆ.

1317. ಜಂಗಮವೇ ಲಿಂಗ

ಲಿಂಗ ಜಂಗಮ, ಜಂಗಮವೆ ಲಿಂಗವೆಂಬುದ
ಎನಗೆ ತೋರಿದವರಾರಯ್ಯಾ?
ಲಿಂಗವ ಪೂಜಿಸಿದಡೆ ಭವ ಹರಿಯದೆಂದು,
ಜಂಗಮಮುಖ ಲಿಂಗವಾಗಿ ಬಂದು ಶಿಕ್ಷಿಸಿ, ರಕ್ಷಿಸಿ,
ಎನ್ನ ಆದಿ ಅನಾದಿಯ ತೋರಿ,
ಪ್ರಾಣಲಿಂಗ ಜಂಗಮವೆಂದು ಎನಗೆ ಪ್ರತಿಷ್ಠಿಸಿ ತೋರಿದಿರಾಗಿ
ಲಿಂಗದೇವಾ ನಿಮ್ಮಿಂದಲಾನು
ಸರ್ವಾಚಾರ ಸಂಪತ್ತನರಿದು, ಬದುಕಿದೆನು ಕಾಣಾ!

ದೇವರು ನಿರಾಕಾರ, ನಿರವಯವ. ಅವನ ಸಾಕಾರವೇ ಜಂಗಮ ಅರ್ಥಾತ್ ಸಮಾಜ, ಸಕಲ ಜೀವರಾಶಿ. ಜಂಗಮವೆ ಲಿಂಗದ ಬಾಯಿ. ಲಿಂಗಪೂಜೆಯಿಂದ ಆತ್ಮೋದ್ಧಾರವಾಗಬಹುದೇ ವಿನಾ ಭವ ಹರಿಯದು ಎಂದು ಜಂಗಮ ರೂಪದಲ್ಲಿ ಬಂದು ಶಿಕ್ಷಿಸಿ, ರಕ್ಷಿಸಿದೆ. ನನ್ನ ಆದಿಯನ್ನು ತೋರಿದೆ. ಅಂದರೆ ನಾನು ಒಂದು ಮಣಿಹ (ಉದ್ದೇಶ)ವನ್ನು ಹೊತ್ತು ಹುಟ್ಟಿದವನು ಎಂಬುದನ್ನು ಮನವರಿಕೆ ಮಾಡಿದೆ. ನನ್ನ ಅನಾದಿಯನ್ನು ಅಂದರೆ ನನ್ನನ್ನು ಅನಾದಿಯಾದ ಕರ್ತನು ಕಳುಹಿಸಿದ್ದಾನೆ ಎಂಬುದನ್ನು ಮನಗಾಣಿಸಿದೆ. ನನ್ನ ಪ್ರಾಣವೆ ಸಮಾಜ ಎಂಬುದನ್ನು ನನ್ನಲ್ಲಿ ಅಳವಡಿಸಿದೆ. ಲಿಂಗದೇವಾ, ನಿಮ್ಮ ಅನುಗ್ರಹದಿಂದ ಇದೆಲ್ಲವನ್ನು ನಾನು ಅರಿತು ಸರ್ವಾಚಾರ ಸಂಪನ್ನನಾಗಿ, ಸರ್ವಾಚಾರಗಳನ್ನು ಜಗತ್ತಿಗೆ ನೀಡಿದೆ ಲಿಂಗದೇವ.

1318. ಅರ್ಥವಾಗದ ವಚನ

ಏರಂಡದ ಬಿತ್ತಿನಂತೆ, ರಸವಾರಿಯಂತೆ,
ಪಶುವಿನ ಪಿಸಿತದಲ್ಲಿ ತಲೆದೋರುವ ಅಮೃತದಂತೆ
ಕಾಯವಿಡಿದು ಬಂದಡೆ ನಿನಗಾ ಭಾವವಿಲ್ಲ.
ಲಿಂಗದೇವರಲ್ಲಿ
ಪ್ರಭುದೇವರ ಸುಳುಹು ಅಗಮ್ಯವಾಯಿತ್ತು.

ಈ ವಚನ ಅರ್ಥವಾಗುತ್ತಲಿಲ್ಲ. ಗುರು ಬಸವಣ್ಣನವರ ತತ್ವಗಳಿಗೆ ವಿರುದ್ಧವಾದ ಒಂದು ವಾಕ್ಯ ಬರುತ್ತಿರುವುದರಿಂದ ಇದಕ್ಕೆ ವ್ಯಾಖ್ಯಾನ ಬರೆಯಲಾಗುತ್ತಲಿಲ್ಲ.

1319. ಭಯಂಕರ ರೂಪದ ಪ್ರಭುದೇವರು

ಕೆದರಿದ ತಲೆಯ, ತೊನೆವ ನಡೆಯ, ಹಣೆಯ ಬುಗುಟಿನ
ಕರಸ್ಥಲದ ಅನಿಮಿಷದಿಂದ ಬಹಿರಂಗದವಧಾನ ತಪ್ಪಿ,
ಇದಿರುಗೊಯಿಲು ತಾಗಿ, ಮರ್ಬೊಡೆದು,

ಕಣ್ಣು ತರಿದು, ಕಿವಿ ಹರಿದು,
ಜೋಲುವ ರಕ್ತಧಾರೆಯ, ಗಾಳಿಯ ಧೂಳಿಯ ಮಳೆಯ ಜಾರಿನ
ಬೆನ್ನ ಬಾಸುಳದ, ಎಡಬಲದ ಬರಿಯ ತಧ್ದಿನ, ಮುಳ್ಳುದರಹನ
ಕಂಕುಳ ಸೀಳ ಕಂಡು ನೋಡುವ ಜನರು ಬೆರಗಾಗೆ-
ಹೊರವಾರಿನ ಮಸಿಯ ದಿಗಂಬರದ ಬಣಗು ಸುರಿವುತ್ತ
ಆಪ್ಯಾಯನವರತು, ಬಿದ್ದು, ಮೊಳಕಾಲೊಡೆದು,
ಹೊಸ ಹುಣ್ಣಿನ ರಕ್ತದ ಜೋರು ಹರಿದು,
ಮುಂಗಾಲ ಕಣೆಹೊಳೆದು ಕಣಕಾಲ ಸಂದು ತಪ್ಪಿ,
ಕಿರುಬೆಣೆ ಎಡಹಿ ಹೆಬ್ಬೊಟ್ಟೊಡತದ ಗಾಯದ,
ಉರುಗು ಟೊಂಕದ, ಪೆರಚು ಗುಂಟನ ನೋಡಾ ಚನ್ನಬಸವಣ್ಣಾ!
ಅತ್ಯಂತ ಮಲಿನ, ಲಿಂಗದೇವರ ಕುರುಹು ವಿಪರೀತ!
ನೋಡುವಡೆ ಭಯಂಕರವಾಗಿದೆ ನೋಡಯ್ಯಾ!

ಇದೊಂದು ವಿಚಿತ್ರವಾದ ವಚನ. ಅಲ್ಲಮ ಪ್ರಭುದೇವರು ಶೂನ್ಯ ಪೀಠಾರೋಹಣ ಮಾಡಿದ ಕೆಲವು ದಿನಗಳ ನಂತರ ಧರ್ಮಪ್ರಚಾರಾರ್ಥ ಸಂಚಾರ ಹೊರಡುವರು. ಸಂಚಾರ ಮುಗಿಸಿಕೊಂಡು ಬಂದಾಗ ಅವರ ರೂಪವು ವಿಲಕ್ಷಣವಾಗಿ ಭಯಂಕರವಾಗಿ ಅಕರಾಳ ವಿಕರಾಳ ವಾಗಿ ಇರುವುದು.

ಕೆದರಿದ ತಲೆ, ತೂಗಾಡುವ ನಡೆಯು, ಬುಗುಟು ಮೂಡಿದ ಹಣೆಯ, ಕರಸ್ಥಲದ ಇಷ್ಟಲಿಂಗದ ಮೇಲೆ ದೃಷ್ಟಿ ನಟ್ಟು ಹೊರಗಿನ ಪ್ರಜ್ಞೆಯಳಿದ ಸ್ಥಿತಿ; ಒಂದು ಕೊಯಿಲು (ಕೂಳೆ)ತಾಗಿ ಹುಬ್ಬು-ಹಣೆ ಒಡೆದು, ಕಣ್ಣು ತರಿದು ಕಿವಿ ಹರಿದಿದೆ. ಅಲ್ಲಲ್ಲೇ ರಕ್ತದ ಧಾರೆ ಹರಿಯುತ್ತಿದೆ, ಮೈಯಲ್ಲೆಲ ಗಾಳಿಯಿಂದ ಮುಸುಕಿದ ಧೂಳು, ಮಳೆಯಿಂದ ತೋಯಿಸಿಕೊಂಡ ವಿಲಕ್ಷಣ ಸ್ಥಿತಿ. ಬೆನ್ನ ಮೇಲೆ ಬಾಸುಂಡೆ ಮೂಡಿವೆ. ಎಡಬಲದ ಪಕ್ಕದಲ್ಲಿ ಮಾಂಸಖಂಡಗಳು ಕಾಣುತ್ತಿವೆ. ಮೈಯಲ್ಲೆಲ್ಲ ಮುಳ್ಳು ಚುಚ್ಚಿವೆ; ಕಂಕುಳಲ್ಲಿ ಸೀಳು ಮೂಡಿವೆ. ಈ ರೂಪ ಕಂಡು ಜನರು ಆಶ್ಚರ್ಯಚಕಿತರಾಗುತ್ತಿದ್ದಾರೆ. ದಿಗಂಬರ ರೂಪ, ಹಸಿವೆ ಬತ್ತಿ ಹೋಗಿದೆ ಬಿದ್ದು ಮೊಳಕಾಲು ಒಡೆದಿದೆ. ಮೈಯಲ್ಲೆಲ್ಲ ಹುಣ್ಣುಗಳಾಗಿ ರಕ್ತ ಸೋರುತ್ತಿದೆ. ಮುಂಗಾಲಿನ (ಮೊಳಕಾಲಿನ) ಚಿಪ್ಪು ಒಡೆದು, ಮೊಳಕಾಲಿನ (ಕಣಕಾಲ) ಸಂದು ತಪ್ಪಿದೆ. ಒಂದು ಸಣ್ಣ ಬೆಣೆ (ಕೋಲು) ಎಡವಿ ಹೆಬ್ಬೆಟ್ಟು ಒಡೆತದಿಂದ ಗಾಯವಾಗಿದೆ. ಸೊಂಟವು ಬಗ್ಗಿದೆ. ಮೈಯಲ್ಲೆಲ್ಲ ಗಂಟುಗಳು. ಅತ್ಯಂತ ಕೊಳಕಾದ ವ್ಯಕ್ತಿ. ನೋಡಲಿಕ್ಕೆ ಭಯಂಕರವಾದ ಅಸಹ್ಯವಾದ ರೂಪವಾಗಿದೆ ನೋಡು ಚನ್ನಬಸವಣ್ಣ.

ಇಂಥ ವ್ಯಕ್ತಿಯನ್ನು ಪ್ರಭುದೇವರು ಎಂದು ಗುರು ಬಸವಣ್ಣನವರು ಗುರುತಿಸುತ್ತಾರೆ. ಈ ಪ್ರಸಂಗವನ್ನು ಶೂನ್ಯ ಸಂಪಾದನೆಕಾರರು ಏಕೆ ಸೃಷ್ಟಿಸಿದ್ದಾರೋ ತಿಳಿಯದು. ಸಿದ್ಧಪುರುಷರು, ಮಹಾಜ್ಞಾನಿಗಳೂ ಆದ ಅಲ್ಲಮ ಪ್ರಭುಗಳು ಈ ರೀತಿ ವಿಕೃತರೂಪವನ್ನು ಹೊಂದಲು ಸಾಧ್ಯವೇ ಇಲ್ಲ.

1320. ಪ್ರಭುದೇವರ ಸುಳುಹು

ಕತ್ತಲೆಯ ನುಂಗಿದ ದೀಪದ ಬೆಳಗಿನಂತೆ
ಕರ್ದಮವನೀಟದ ಸುಜಲದಂತೆ
ಮಧುರ ರಸವನರಿದ ಜಿಹ್ವೆಯಂತೆ-
ಎನ್ನ ಕಂಗಳಿಗೆ ದೃಷ್ಟವಾಗಿ ಮನಕ್ಕೆ ಮನೋಹರವಾಗಿ
ಲಿಂಗದೇವರಲ್ಲಿ ಪ್ರಭುದೇವರ ಸುಳುಹು ಚಿಹ್ನವಾಯಿತು.

ದೀಪದ ಬೆಳಗು ಚಲ್ಲವರಿಯುತ್ತಲೇ ಕತ್ತಲೆ ಅಡಗಿ ಹೋಗುವಂತೆ ಅಲ್ಲಮಪ್ರಭುದೇವರು ಎಲ್ಲಿ ಸಂಚರಿಸುವರೋ ಅಲ್ಲಿ ಜ್ಞಾನದ ಬೆಳಕು ಪಸರಿಸಿ ಅಜ್ಞಾನದ ಕತ್ತಲೆ ದೂರವಾಗುವುದು. ಕರ್ದಮ ಅಂದರೆ ಕೆಸರು. ಕೆಸರನ್ನು ಕೆಳಗೆ ದೂಡಿ ತಿಳಿಯಾಗಿ ನಿಲ್ಲುವ ನೀರಿನಂತೆ ಪ್ರಭುದೇವರು ಇದ್ದಲ್ಲಿ ಮನಸ್ಸಿನ ಕಲುಷಿತತೆ ಅಡಗಿ ಅಂತರಂಗ ಶುದ್ಧಿ ಎಂಬ ತಿಳಿ ನೀರು ನಿಲ್ಲುವುದು. ಸಿಹಿಯನ್ನು ತಿಂದಾಗ ನಾಲಿಗೆಗೆ ಆನಂದವಾಗುವಂತೆ ಪ್ರಭುವಿನ ವಾಣಿಯನ್ನು ಕೇಳಿದಾಗ ಮನಸ್ಸಿಗೆ ಮುದದ ಅನುಭವವಾಗುವುದು. ನನ್ನ ಕಣ್ಣಿಗೆ ಗೋಚರವಾಗುತ್ತಿರುವ ಪ್ರಭುವಿನ ರೂಪವು ಮನಕ್ಕೆ ಮನೋಹರವೆನ್ನಿಸುತ್ತದೆ. ಪ್ರಭುದೇವರು ಬರುವರು ಎಂಬ ಸುದ್ದಿ ತಿಳಿದಿತ್ತು. ಇದೀಗ ಬಂದಿರುವವರು ಅವರೇ ಎಂದು ನನಗೆ ತೋರುತ್ತಿದೆ. 1319ನೆಯ ವಚನ ವಿಚಿತ್ರವೂ, ಅಸಂಭವವೂ ಎನಿಸುತ್ತಿದೆ. ಆದರೆ 1320ನೆಯ ವಚನ ಸುಸಂಗತವೆನಿಸುತ್ತದೆ.

1321. ಮಹಾಯೋಗಿ ಅಲ್ಲಮಪ್ರಭುದೇವರು

ಕಾಲಿಲ್ಲದೆ ನಡೆವನು, ಕೈಯಿಲ್ಲದೆ ಹಿಡಿವನು
ಕಣ್ಣಿಲ್ಲದೆ ನೋಡುವನು ಸಹಜವಾಗಿ
ಮೈಯಿಲ್ಲದ ಬಣ್ಣ, ಮಥನವಿಲ್ಲದ ಕೂಟ,
ಅಲ್ಲಿ ಸ್ವೈರೆಗಾಗಿ ಶಿಲೆಯ ಮೇಲೆ
ಒಡಲು ತನ್ನರಿಯದು. ಒಡಲ ತಾನರಿಯನು,
ಬಿಡದೆ ಎನ್ನ ಬೆಂಬತ್ತಿ ಬಂದ ಪರಿಯ ನೋಡಾ.
ಜಡವಿಡಿದ ಎನ್ನ ಕಾಯದ ಕಳವಳದ ತಿಳುಹಲೆಂದು,
ಅಡಿಗಡಿಗೆ ಅನುಭಾವವ ತೋರುತ್ತಲಿದ್ದಾನೆ.
ಕುಳ್ಳಿತ್ತೆಡೆಯಲ್ಲಿ ಕುಂಟ, ನಿಂದಿದ್ದೆಡೆಯಲ್ಲಿ ಹೆಳವ,
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು.
ಮೆಲ್ಲಮೆಲ್ಲನೆ ಒಳಗನೊರೆದು ತೋರುತ್ತೈದಾನೆ
ಬಲ್ಲವರೆಲ್ಲಾ ಬದುಕಿಯೆಂದು
ಝಲ್ಲರಿಯ ಮೇಲೊಂದು ಬೆಳುಗೊಡೆಯ ಹಿಡಿದು
ಬಲ್ಲಿದನಾನೆಯ ತಡೆದು ನಿಲಿಸಬಲ್ಲನು.
ಲಿಂಗದೇವರ ಮಹಾಮನೆಯಲ್ಲಿ
ಪ್ರಭುದೇವರ ಮರೆಯ ಹೊಕ್ಕು ಬದುಕಿದೆನು.

ಅಲ್ಲಮಪ್ರಭುವಿನ ವ್ಯಕ್ತಿತ್ವ ಅಮೋಘ. ಕಾಲಿಲ್ಲದೆ ನಡೆವನು ಅಂದರೆ ದುರಾಚಾರವಿಲ್ಲದ ನಡೆ; ಕೈಯಿಲ್ಲದೆ ಹಿಡಿವನು ಅಂದರೆ ದುಷ್ಕರ್ಮವಿಲ್ಲದೆ ವ್ಯವಹರಿಸುವನು. ಕಣ್ಣಿಲ್ಲದೆ ನೋಡುವನು ಅಂದರೆ ಪ್ರಾಕೃತಿಕ ದೃಷ್ಟಿಕೋನ ಅಳಿದು ಸಮ್ಯಕ್‌ದೃಷ್ಟಿ ಅಳವಟ್ಟಿದೆ. ಮೈಯಿಲ್ಲದ ಬಣ್ಣ ಅಂದರೆ ಶರೀರ ಗುಣಗಳಾದ ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ, ಬಯಕೆಗಳನ್ನು ಕಳೆದುಕೊಂಡ ನಿರ್ವಿಕಾರ ನಿಲುವು. ಮಥನವಿಲ್ಲದ ಕೂಟ ಅಂದರೆ ಆತನ ಒಡನಾಟ ಅತ್ಯಂತ ಆಧ್ಯಾತ್ಮಿಕ. ಅಲ್ಲಿ ವ್ಯವಹಾರವಿಲ್ಲ. ಶಿಲೆಯೋಪಾದಿಯಲ್ಲಿ ಸ್ತಂಭೀಭೂತನಾಗಿ ಧ್ಯಾನಾಸಕ್ತನಾಗಿರುವನು.

ಶರೀರವು ಆತನನ್ನು ಬಾಧಿಸುತ್ತಿಲ್ಲ, ಆತ ಶರೀರದ ಇರುವಿಕೆಯನ್ನೇ ಮರೆತಿದ್ದಾನೆ. ಎಲ್ಲೆಲ್ಲೋ ಸಂಚರಿಸಿದರೂ ನನ್ನನ್ನು ಮರೆಯದೆ ಪುನಃ ಬೆಂಬತ್ತಿ ಬಂದಿದ್ದಾನೆ. ಜಡಗೊಂಡ ನನ್ನ ಶರೀರ, ಮನಸ್ಸುಗಳಿಗೆ ಲವಲವಿಕೆ, ಚೈತನ್ಯ ತುಂಬಬೇಕೆಂದೇ ಬಂದು ಹೆಜ್ಜೆ ಹೆಜ್ಜೆಗೂ ಅನುಭಾವವನ್ನು ತನ್ನ ನಡೆ-ನುಡಿಯಿಂದ ತೋರುತ್ತಿದ್ದಾನೆ. ಕುಳಿತೆಡೆಯಲ್ಲಿ ಕುಂಟನಂತೆ, ನಿಂತಿದ್ದೆಡೆಯಲ್ಲಿ ಹೆಳವನಂತೆ ನಿಸ್ಸಹಾಯಕನಾಗಿ ತೋರುವ ಈತ ಪರಿಪೂರ್ಣ ವ್ಯಕ್ತಿತ್ವ ಉಳ್ಳವನು.

ತನ್ನ ವಿಲಕ್ಷಣ ವರ್ತನೆ (ವಿಕಾರ ದೇಹ)ಯಿಂದ ನಮ್ಮನ್ನು ಪರೀಕ್ಷೆಗೆ ಒಡ್ಡಿದಂತೆ ತೋರುತ್ತದೆ. ಬಲ್ಲವರು,. ಅರಿವುಳ್ಳವರು ಬದುಕಲಿ ಎಂದು ಜರಡಿಯ ಮೇಲೆ ಒಂದು ಬಿಳಿಯ ಕೊಡೆಯನ್ನು ಹಿಡಿದು ಒಂದು ಉನ್ಮತ್ತ ಆನೆಯನ್ನು ಬೇಕಾದರೂ ತಡೆದು ನಿಲ್ಲಿಸುವಂತಹ ಪವಾಡ ಪುರುಷನು. ಇಂಥ ಮಹಾಪುರುಷನ ಮರುಬರುವು ಮಹಾಮನೆಗೆ ನಂದಾದೀಪ ಹಚ್ಚಿದಂತೆ ಇಂಥ ಪ್ರಭುದೇವರಲ್ಲಿ ನಾನು ರಕ್ಷಣೆ ಪಡೆದೆನು.

1322. ಪ್ರಭುವಿನ ಪುನರಾಗಮನ

ಕಂಗಳೆ ಕರುಳಾಗಿ ಉರವಣಿಸಿ ಬಪ್ಪವನ
ಬರವ ನೋಡಾ, ಇರವ ನೋಡಾ, ಪರವ ನೋಡಾ,
ಇಹಪರವ ನೋಡಾ, ಇಹಪರವೊಂದಾದ ಘನವ ನೋಡಾ.
ಇಂತೀ ಘನಕ್ಕೆ ಘನವ ನೋಡಾ.
ಕರುವಿಟ್ಟ ರೂಪಿನಂತೆ ಕಂಗಳೆರಡು ಹಳಚದೆ
ಭುಗಿಲನೆ ನಡೆತಹ
ಇಂತಪ್ಪ ಗರುವ ಪ್ರಭುವ ಕಂಡೆವ್ಯೆ ಲಿಂಗದೇವಾ.

ಕಣ್ಣಿನಲ್ಲಿ ಕರುಳಿನ ಮಮಕಾರವನ್ನು ತುಂಬಿಕೊಂಡು (ಮೇಯಲು ಹೋದ ಹಸುವು ಮನೆಯಲ್ಲಿರುವ ಎಳೆಗರುವಿಗೆ ಹಾಲನ್ನೂಡಿಸಬೇಕೆಂದು ಧಾವಿಸಿ ಬರುವಂತೆ) ಧಾವಿಸಿ ಬರುತ್ತಿರುವ ಪ್ರಭುವಿನ ರಭಸವನ್ನು ನೋಡಿರಿ. ಇರುವಿಕೆಯನ್ನು ನೋಡಿರಿ, ಪಾರಲೌಕಿಕತೆ ನೋಡಿರಿ. ಆದರೆ ಐಹಿಕ ಕರ್ತವ್ಯವನ್ನು ಮರೆತಿಲ್ಲ. ಶಿಲೆಯ ಮೂರ್ತಿಯೇನೋ ಎಂಬಂತೆ ಕಣ್ಣುಗಳೆರಡನ್ನೂ ಮಿಟುಕಿಸದೆ ಭುಗಿಲನೆ ನಡೆಯುತ್ತಿರುವನು. ಇಂತಹ ಗರುವ, ಧೀಮಂತ ಯೋಗಿ ಪ್ರಭುವನ್ನು ನಾವಿಂದು ಕಾಣುತ್ತಿದ್ದೇವೆ.

1323. ಪ್ರಭುದೇವರ ಸುಳುಹು ವಿಸ್ಮಯ

ಕಾಯದ ಕುರುಹುವಿಡಿದು ಬಂದನೆಂಬ
ಆ ಭಾವದ ಇರವೇತಕ್ಕೆ ನಿಮಗೆ?
ಅಂಬರದ ಚಾಪ ಮುಗಿಲೊಳಗೆ ಹೊಂದಿತ್ತೆ?
ಬೇರೊಂದರಲ್ಲಿ ಸಂದಿತ್ತೆ?
ಅದರಂಗದ ಛಾಯೆ, ಪ್ರಭುದೇವರ ನಿಂದ ಸುಳುಹು!
ಲಿಂಗದೇವರಲ್ಲಿ ಭಿನ್ನವಿಲ್ಲದೆ ನಿಂದ ಕಾಯದಂಗ.

ವಿಲಕ್ಷಣವಾದ, ವಿಕಾರವಾದ ಶರೀರವನ್ನು ಹೊತ್ತು ಬಂದಿರುವುದು ಪ್ರಭುದೇವರೋ ಅಲ್ಲವೋ ಎಂಬ ಸಂದೇಹವೇಕೆ ನಿಮಗೆ? ಆಕಾಶದಲ್ಲಿ ಕಾಮನ ಬಿಲ್ಲು ಮೂಡುವುದು. ಅದೇನು ಮೋಡದಲ್ಲಿ ಸಿಕ್ಕಿಕೊಳ್ಳುವುದೆ? ಅಥವಾ ಬೇರೆ ಯಾವುದರಲ್ಲಾದರೂ ಅಡಗುವುದೆ? ಅದು ಕೇವಲ ಒಂದು ಛಾಯೆ. ಅದೇ ರೀತಿ ಪ್ರಭುದೇವರ ನಿಲುವು. ಇದು ಅವರ ಒಂದು ಬಗೆಯ ರೂಪು ಅಷ್ಟೆ!

1324. ಲಿಂಗದ ಬಾಯಿ ಜಂಗಮ

ಎಣಿಕೆಗೆ ಬಂದ ಸಯದಾನ ಕ್ಷಣಕ್ಕೆ ಪಾಕವಾಗಲು
ಗಣನೆಯಿಲ್ಲದೆ ನೀಡುತ್ತಿರಲು, ತೋರದ ಮುನ್ನವೆ ಅರ್ಪಿತವಾದವು.
ಇಂತು ಎಣಿಸಿ ನೋಡಿಹೆನೆಂದಡೆ ಮನಕೆ ಸಾಧ್ಯವಿಲ್ಲ.
ಬಯಲು ಬಾಯಿದೆಗೆದಂತೆ ಉಣ್ಣುತ್ತಿದ್ದಾನು ಲಿಂಗದೇವನು.

ಶೂನ್ಯ ಸಂಪಾದನಕಾರರು ಪ್ರಭುದೇವರ ಭೋಜನ ಪ್ರಸಂಗ ಎಂಬ ಒಂದು ಪ್ರಸಂಗವನ್ನೇ ಸೃಷ್ಟಿಸಿ ಪ್ರಭುವನ್ನು ಒಬ್ಬ ಬಕಾಸುರನಂತೆ ಚಿತ್ರಿಸಿದ್ದಾರೆ. ಈ ವಚನವನ್ನು ಆ ಪ್ರಸಂಗದಲ್ಲಿ ಸೇರಿಸಲಾಗಿದೆ. ಆದರೆ ನನ್ನ ಊಹೆ ಬೇರೆಯಿದೆ. ಪ್ರಭುದೇವರು ಶೂನ್ಯ ಪೀಠಾಧಿಕಾರಿಯಾಗಿ ಇರುವಾಗ ಒಂದು ಬೃಹತ್ ಗಣಪರ್ವ ನಡೆಯುತ್ತದೆ. ಇದರಲ್ಲಿ ದೇಶದ ನಾನಾ ಭಾಗಗಳಿಂದ ಬಂದು ಜನರು ಸಮಾವೇಶವಾಗುತ್ತಾರೆ. ಗಣ ದಾಸೋಹಕ್ಕಾಗಿ ಅಡಿಗೆಯನ್ನು ಮಾಡಿ ಮಾಡಿ ನೀಡುತ್ತಾರೆ. ಸಾಕಾಗುತ್ತಲಿಲ್ಲ ಅದನ್ನು ಈ ವಚನದಲ್ಲಿ ಗುರು ಬಸವಣ್ಣನವರು ವಿವರಿಸುತ್ತಾರೆ.

ಪದಾರ್ಥಗಳನ್ನು (ಸಯದಾನ) ತಕ್ಷಣ ಪಾಕ ಮಾಡಿ ನೀಡುತ್ತಿದ್ದರೂ ಕ್ಷಣಾರ್ಧದಲ್ಲಿ ಮಾಡಿದ ಅಡಿಗೆ ಖರ್ಚಾಗುತ್ತಲಿದೆ. ಸಹಸ್ರಾರು, ಲಕ್ಷಾಂತರ ಜನರು ಎಣಿಸಿ ನೋಡಲು ಮನಸ್ಸಿಗೆ ಸಾಧ್ಯವಿಲ್ಲ. ಬಯಲು ಬಾಯಿತೆಗೆಯಿತೇನೋ ಎಂಬಂತೆ ಲಿಂಗದೇವನು ಈ ಶರಣರ ಮೂಲಕ ಉಣ್ಣುತ್ತಿದ್ದಾನೆ. ಈ ವಚನದಲ್ಲಿ ಅಲ್ಲಮಪ್ರಭುವಿನ ಹೆಸರೇ ಇಲ್ಲ. ಆದರೂ ಈ ವಚನವನ್ನು ಪ್ರಭುದೇವರ (ಕೃತಕ)ಭೋಜನ ಪ್ರಸಂಗದಲ್ಲಿ ಸೇರಿಸಲಾಗಿದೆ.

ದಿ.28–10–2012ರಂದು ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಲೋಕಾರ್ಪಣೆ ಯಾದಾಗ ಲಕ್ಷಗಟ್ಟಳೆ ಜನ ಸೇರಿದರು. ಅಂದಿನ ಅಡಿಗೆಯ ಪರಿಸ್ಥಿತಿ ಗುರು ಬಸವಣ್ಣನವರು ವರ್ಣಿಸಿದಂತೆಯೇ ಇತ್ತು. ಇದಕ್ಕೆ ಹೋಲುವ ಮತ್ತೊಂದು ವಚನ 1326ನೆಯದು. ಮೊದಲು ಅದನ್ನು ನೋಡಿ ನಂತರ 1324 ಓದಿರಿ.

1325.

ಬಸುರೆ ಬಾಯಾಗಿ ಬಾಯೆ ಬಸುರಾಗಿಪ್ಪುದ ತೋರಿದ
ಕಣ್ಣೆ ತಲೆಯಾಗಿ ತಲೆಯೆ ಕಣ್ಣಾಗಿರಿಸಿದ,
ಕಾಲೆ ಕೈಯಾಗಿ ಕೈಯೆ ಕಾಲಾಗಿ ನಡೆಸಿದ
ನೆಳಲುನುಟ್ಟ ಸೀರೆಯನೆನಗೆ ಉಡುಗೊರೆಯ ಕೊಟ್ಟನು.
ಮಥನವಿಲ್ಲದ ಸಂಗಸುಖವನೆನಗೆ ತೋರಿದನು. ಲಿಂಗದೇವಾ.
ಪ್ರಭುವಿನ ಶ್ರೀ ಪಾದಕ್ಕೆ ಶರಣೆನುತಿರ್ದೆನು.

ಹೊಟ್ಟೆಯೇ ಬಾಯಿಯಾಗಿದೆಯೋ, ಬಾಯಿಯೇ ಹೊಟ್ಟೆಯಾಗಿದೆಯೋ ಎಂದು ಸಂದೇಹ ಬರುತ್ತಿದೆ. ಕಣ್ಣುಗಳು ದೃಷ್ಟಿ ಚೆಲ್ಲಿದಲ್ಲೆಲ್ಲ ಜನರು; ಅಡಿಗೆ ಮಾಡುವವರ, ನೀಡುವವರ ಕಾಲುಗಳು, ಕೈಗಳಿಗೆ ಪುರುಸೊತ್ತೇ ಇಲ್ಲ. ಕಾಲು ಸರಸರನೆ ಓಡಾಡುತ್ತಿವೆ. ಕೈಯಿ ಲಗುಬಗನೆ ಕೆಲಸ ಮಾಡುತ್ತಿವೆ. ಅಪಾರ ಜ್ಞಾನವನ್ನು, ಯೋಗವಿದ್ಯೆಯನ್ನು (ನೆಳಲನುಟ್ಟ ಸೀರೆ)ನನಗೆ ಉಡುಗೊರೆ ಯಾಗಿ ಕೊಟ್ಟನು. ಉತ್ಕೃಷ್ಟವಾದ ಶರಣರ ಸಂಗವನ್ನು ನನಗೆ ತೋರಿದನು. ಲಿಂಗದೇವಾ, ಇಂಥ ಪ್ರಭುವಿನ ಶ್ರೀ ಪಾದಕ್ಕೆ ನಾನು ಶರಣು ಎನ್ನುತಿರ್ದೆನು.

1326. ದೇವರ ಊಟ

ಮೊರಹಾರ ನೀಡಿದಡೆ ತೆರಹಾರ ಕೊಳ್ಳುತ್ತೈದಾನೆ
ಅಹುದಹುದು ಮತ್ತೇನು?
ದೇವರ ಹಸಿವು ನಮಗೆ ಹೊಸತಲ್ಲ.
ದೆಸೆದಿಕ್ಕೆಲ್ಲವನೊಳಗೊಂಡ ವಿಶ್ವತೋಮುಖದ
ಲಿಂಗದೇವಂಗೆ ದೆಸೆದೆಸೆಯಲ್ಲಿ ನೀಡಿ

ಮೊರದಲ್ಲಿ ನೀಡುವುದು ಸಾಕಾಗದೆ ಕೊಳಗಗಳಲ್ಲೇ ನೀಡುವಂತೆ ಮಾಡುತ್ತಿದ್ದಾನೆ; ಅಹುದು ದೇವರ ಹಸಿವು ನಮಗೆ ಹೊಸತಲ್ಲ. (ಈ ವಾಕ್ಯ ಇಂಥ ಗಣಪರ್ವಗಳು ಆಗಾಗ

ನಡೆಯುತ್ತಿದ್ದ ವೆಂಬುದಕ್ಕೆ ಸಾಕ್ಷ್ಯ ನುಡಿಯುತ್ತದೆ.) ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿದ (ಎಲ್ಲೆಡೆಯಿಂಡ ಬಂದ ಶರಣರಿಗೆ) ವಿಶ್ವತೋಮುಖ ನಾದ ಲಿಂಗದೇವನಿಗೆ ಎಲ್ಲ ದಿಕ್ಕುಗಳಲ್ಲೂ ನೀಡಿರಿ.

1327. ಲಿಂಗದೇವನ ತೃಪ್ತಿ ಹೇಗೆ ಮಾಡುವುದು?

ತೋರಲಿಲ್ಲದ ಸಿಂಹಾಸನದ ಮೇಲೆ
ಹೇಳಬಾರದ ಘನವು ಬಂದೆರಗಿದಡೆ,
ತೋರಿ ಮೆರೆವ ಸಂಗಮನಾಥನು ಎದ್ದು ಹೋದನು.
ನೀಡ ನೀಡ ಸಯದಾನವೆಲ್ಲವೂ ನಿರ್ವಯಲಾಯಿತ್ತು.
ಮಾಡ ಮಾಡ ಸಯದಾನವ ಮರಳಿ ನೋಡಲಿಲ್ಲ.
ಇದನೇನ ಹೇಳುವೆ ಅನಿಯಮ ಚರಿತ್ರವನು?
ಇದೆಂತುಪಮಿಸುವೆನು ವಿಸ್ಮಯವನು?
ಲಿಂಗದೇವರ ತೃಪ್ತಿಯ ತೆರನ ಬಲ್ಲಡೆ
ಹೇಳಯ್ಯಾ, ಚನ್ನಬಸವಣ್ಣಾ.

ಗುರು ಬಸವಣ್ಣನವರಿಗೆ ಒಂದು ದಿನ ಜ್ಞಾನೋದಯವಾಯಿತು. ದೇವರ ಸ್ವರೂಪ ಅರ್ಥವಾಯಿತು. ಬ್ರಹ್ಮ, ವಿಷ್ಣು, ಮಹೇಶ್ವರರನ್ನೂ ಮೀರಿದ ಒಂದು ಶಕ್ತಿಯುಂಟು. ಅದುವೇ ಪರಮಾತ್ಮ. ಅವನೇ ಏಕಮೇವ ಆರಾಧ್ಯವಸ್ತು ಎಂಬ ತಿಳುವಳಿಕೆಯುಂಟಾಯಿತು. ಆಗ ತೋರಲಿಲ್ಲದ ಸಿಂಹಾಸನದ ಹ್ಧದಯದಲ್ಲಿ ಹೇಳಬಾರದ ಘನವಾದ ಪರಮಾತ್ಮನು ಬಂದು ಸ್ಥಾಪನೆಗೊಂಡಾಗ ಆವರೆಗೂ ಅಲ್ಲಿ ಮೆರೆಯುತ್ತಿದ್ದ ಸಂಗಮನಾಥ ಎದ್ದು ಹೋಗಿಬಿಟ್ಟ (ಏಕದೇವತಾ ಉಪಾಸನೆಯಿಂದ ಏಕದೇವೋಪಾಸನೆಗೆ ಪರಿವರ್ತನೆ.) ಇಂದು ಬೃಹತ್ ದಾಸೋಹ ನಡೆಯುತ್ತಿದೆ. ಇರುವ ಪದಾರ್ಥಗಳು ಬರಿದಾಗುತ್ತಿವೆ. ತಂದ ಅಡಿಗೆಯೆಲ್ಲ ಆಪ್ಯಾಯನಕ್ಕೆ ಸಲ್ಲುತ್ತಿದೆ. ಈ ಪ್ರಸಂಗವನ್ನು ಹೇಗೆ ವರ್ಣಿಸುವುದು? ಲಿಂಗದೇವರು ಸಹಸ್ರಾರು ಶರಣರ ಮೂಲಕ ಪ್ರಸಾದವನ್ನು ಆಸ್ವಾದಿಸುತ್ತಿದ್ದಾನೆ. ಇನ್ನೂ ಹೇಗೆ ನಿಭಾಯಿಸಬಹುದು ಎಂಬುದನ್ನು ಹೇಳು ಚನ್ನಬಸವಣ್ಣ.

1328. ಜಂಗಮ ತೃಪ್ತಿ

ತೊರೆಯುದಕವ ಕೆರೆಯುಂಡು ತೃಪ್ತವಾಗಲು
ಆ ಕೆರೆಯುದಕವ ಹಲವು ಕೆಲವು ಸ್ಥಾವರ
ಜಂಗಮಗಳುಂಡು ತೃಪ್ತಿವಡೆವಂತೆ,
ಪ್ರಭುದೇವರ ತೃಪ್ತಿ ಅಸಂಖ್ಯಾತ ಮಹಾಗಣಂಗಳೆಲ್ಲಕ್ಕೆ
ತೃಪ್ತಿಯಾಯಿತ್ತು ನೋಡಾ.
ಬಸುರುವೆಂಡತಿ ಉಂಡಲ್ಲಿ ಒಡಲ ಶಿಶು ತೃಪ್ತಿಯಾದಂತೆ
ಸಚರಾಚರವೆಲ್ಲವು ತೃಪ್ತಿಯಾದವು ನೋಡಾ. ಲಿಂಗದೇವಾ,
ನಿಮ್ಮ ಶರಣ ಪ್ರಭುದೇವರ ಪ್ರಸಾದಮಹಿಮೆಗೆ
ನಮೋ ನಮೋ ಎಂಬೆನು,

ಹರಿಯುವ ತೊರೆಯ ನೀರನ್ನು ಕೆರೆಯು ಉಂಡು ತೃಪ್ತಿಗೊಳ್ಳುವುದು. ಆ ಕೆರೆಯ ನೀರನ್ನು ಅನೇಕ ಹೊಲ ತೋಟ ಗದ್ದೆಗಳೆಂಬ ಸ್ಥಾವರಗಳು, ಪಶುಪಕ್ಷಿ ಮಾನವರೆಂಬ ಜಂಗಮವು ಉಣ್ಣುವುದು. ಅದೇ ರೀತಿ ಪ್ರಭುದೇವರು ಪ್ರಸಾದವನ್ನುಂಡು ತೃಪ್ತಿಪಡೆದರೆ ಅಸಂಖ್ಯಾತ ಗಣಂಗಳಿಗೆಲ್ಲ ತೃಪ್ತಿಯಾಯಿತು. ಗರ್ಭಿಣಿ ಸ್ತ್ರೀ ಊಟ ಮಾಡಿದರೆ ಆಕೆಯ ಒಡಲಲ್ಲಿ ಇರುವ

ಶಿಶುವು ತೃಪ್ತಿಪಡುವಂತೆ ಸಚರಾಚರವೆಲ್ಲವು ತೃಪ್ತಿಯಾದವು. ಲಿಂಗದೇವಾ, ನಿಮ್ಮ ಶರಣ ಪ್ರಭುದೇವರ ಪ್ರಸಾದ ಮಹಿಮೆಗೆ ನಮೋ ನಮೋ ಎಂಬೆನು.

ತ್ಯಾಗಿಯಾದ ಜಂಗಮನಿಗೆ ಉಣ್ಣಿಸಿದರೆ ಸಚರಾಚರವೆಲ್ಲ ತೃಪ್ತಿಯಾಗುತ್ತದೆ ಎಂದು ಇಲ್ಲಿ ಗುರು ಬಸವಣ್ಣನವರು ಹೇಳುತ್ತಾರೆ. ಇಲ್ಲಿ ಉಣ್ಣಿಸಿದರೆ ಎಂದರೆ ಬರೀ ಊಟ ಮಾಡಿಸುವುದು ಎಂದು ಅರ್ಥಮಾಡಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಸಮಾಜಕ್ಕಾಗಿ ತ್ಯಾಗಮಾಡಿ ನಿಂತಂತಹ ಒಬ್ಬ ವ್ಯಕ್ತಿಗೆ-ಜಂಗಮನಿಗೆ ದವಸ-ಧಾನ್ಯ, ಹಣ ಕೊಟ್ಟರೆ ಅದು ಇಡೀ ಸಮಾಜಕ್ಕೆ ವಿನಿಯೋಗ ವಾಗುತ್ತದೆ ಎಂದು ಅರ್ಥ. ಮನೆಯ ಮೇಲಿನ ಸಿಂಟೆಕ್ಸಿಗೆ ನೀರು ತುಂಬಿದರೆ ಆ ಮನೆಗಷ್ಟೆ ಉಪಯೋಗ; ರೆಸರ್‌ವಾಯರ್‌ದಲ್ಲಿ ಇರುವ ನೀರು ಇಡೀ ಊರಿಗೇ ಉಪಯೋಗ. ಹಾಗೆ ಗೃಹಸ್ಥನ ಸಂಪತ್ತು ಅವನ ಮನೆಗೆ ಉಪಯೋಗ, ತ್ಯಾಗಿಯ ಸಂಪತ್ತು ಇಡೀ ಸಮಾಜಕ್ಕೇ ಉಪಯುಕ್ತ.

1329. ದೇವರ ಕೃಪೆಯ ಫಲ

ನಿಮ್ಮ ಕಂಡು, ಕೈಮುಗಿದು, ನಿಮಗೆ ಭಕ್ತನಾದೆನಲ್ಲದೆ
ನಿಮ್ಮ ಕಾಣದಲೆ ಕೈಮುಗಿವ ಭಕ್ತಿಯುಂಟೆ ಅಯ್ಯಾ?
ನಿಮ್ಮ ಮುಟ್ಟಿ ಪೂಜಿಸಿ ಆಚಾರಿಯಾದೆನೆಲ್ಲದೆ,
ನಿಮ್ಮ ಮುಟ್ಟದಲೆ ಎನಗಾಚಾರವೆಲ್ಲಿಯದಯ್ಯಾ?
ನಿಮ್ಮ ಘನವನು ಮನದಲ್ಲಿ ನೆನೆದು ಧರಿಸಿದ ಕಾರಣ
ಜ್ಞಾನೋದಯವಾಯಿತ್ತಲ್ಲದೆ,
ನೀವಿಲ್ಲದಡೆ ಎನಗೆ ಜ್ಞಾನವೆಲ್ಲಿಯದಯ್ಯಾ?
ಇಂತು ಆವ ಮುಖದಲ್ಲಿಯೂ ಎನ್ನನಾಗುಮಾಡಲೆಂದು
ನೀವು ಮುಂದುಗೊಂಡಿದ್ದ ಕಾರಣ
ನಿಮ್ಮ ಸನ್ನಿಧಿಯಲಾನು ಸದಾಚಾರಿಯಾದಡೆ, ನಿಮಗಾನು ಸರಿಯೆ?
ಲಿಂಗದೇವಾ,
ಜಂಗಮಮುಖದಿಂದ ಸಂಗನ ಬಸವಣ್ಣ ಬದುಕಿದನೆಂಬುದ
ಮೂರು ಲೋಕವೆಲ್ಲವು ಬಲ್ಲದು ಕಾಣಾ.

ದೇವರು ನಿರಾಕಾರ ಅವನಿಗೆ ಕೈಮುಗಿಯುವುದು ಹೇಗೆ ಸಾಧ್ಯ? ಕೈ ಎತ್ತಿ ಮುಗಿದರೆ ಮೇಲಿದ್ದಾನೆ ಎಂದರ್ಥ. ಅವನೋ ಸರ್ವವ್ಯಾಪಿ. ನಿರಾಕಾರ ದೇವರನ್ನು ವಿಶ್ವದ ಆಕಾರದಲ್ಲಿ ಸಾಕಾರಗೊಳಿಸಿ ಅಂಗೈಯಲ್ಲಿಟ್ಟಾಗ ನೋಡಿ, ಕುರಂಗ ಮುದ್ರೆಯಿಂದ ಕೈಮುಗಿಯುವುದು ಸುಲಭ. ಹೀಗೆ ನಿಮ್ಮನ್ನು ನೋಡಿ, ಕೈ ಮುಗಿದು, ನಾನು ನಿಮಗೆ ಭಕ್ತನಾದೆ. ಕಾಣದಿದ್ದರೆ ಹೇಗೆ ಕೈಮುಗಿದು ಭಕ್ತಿಯ ಮಾಡಬಹುದು? ಇಷ್ಟಲಿಂಗ ರೂಪದಲ್ಲಿ ನಿಮ್ಮ ಮುಟ್ಟಿ, ಪೂಜಿಸಿ ಆಚಾರ ಸಂಪನ್ನನಾದೆ. ಪೂಜಿಸಲು ನೀನು ಇಲ್ಲದಿದ್ದರೆ ನಾನೆಂತು ಆಚಾರವನ್ನು ಮಾಡಬಹುದಿತ್ತು? ನಿಮ್ಮ ಘನ ಸ್ವರೂಪವನ್ನು ಮನದಲ್ಲಿ ನೆನೆದು, ಅದನ್ನು ವಿಶ್ವದಾಕಾರದಲ್ಲಿ ಸಾಕಾರಗೊಳಿಸಿ ಇಷ್ಟಲಿಂಗವಾಗಿ ಮಾಡಿ ಅಂಗದ ಮೇಲೆ ಧರಿಸಿದ ಕಾರಣ ನನಗೆ ಜ್ಞಾನೋದಯವಾಯಿತು. ನೀನು ಎನ್ನುವ ವಸ್ತುನಿಷ್ಠ ಸತ್ಯವಿಲ್ಲದಿದ್ದರೆ ನನಗೆ ಜ್ಞಾನವು ಹೇಗೆ ಉಂಟುಗುತ್ತಿತ್ತು? (ಅನುಮಾನ ಪ್ರಮಾಣದಿಂದ ದೇವರ ಅಸ್ತಿತ್ವವನ್ನು ನಿರ್ಣಾಯಿಸಲಾಗುವುದು. ಒಂದು ಕಬ್ಬಿಣದ ಚೂರು ಒಂದು ವಸ್ತುವಿಗೆ ಅಂಟಿಕೊಳ್ಳುತ್ತದೆ ಎಂದುಕೊಳ್ಳುವಾ. ಆಗ ಅಲ್ಲಿರುವುದು ಮ್ಯಾಗ್ನೆಟ್ ಎಂದು ಊಹಿಸುತ್ತೇವೆ. ಹಾಗೆ ಅನೇಕ ಅನುಭಾವಿಗಳು, ದಾರ್ಶನಿಕರು ದೇವರಿಂದ ಆಕರ್ಷಿಸಲ್ಪಡುತ್ತಿರುವರು. ದೈವೀಶಕ್ತಿ ಇಲ್ಲದಿದ್ದರೆ ಹಾಗೆ ಆಕರ್ಷಿಸಲು ಆಗುತ್ತಿತ್ತೆ?) ಹೀಗೆ ಎಲ್ಲ ರೀತಿಯಲ್ಲೂ ನನ್ನನ್ನು ಪರಿಪೂರ್ಣ

ಗೊಳಿಸಲೆಂದು ನೀನು ಮುಂದಾಗಿರುವ ಕಾರಣ, ನಿಮ್ಮ ಸನ್ನಿಧಿಯಲ್ಲಿ ನಾನು ಸದಾಚಾರಿಯಾಗಿದ್ದೇನೆ. ಹೀಗೆ ನಿನ್ನಿಂದ ನಾನು ಉನ್ನತ ವ್ಯಕ್ತಿತ್ವ ಪಡೆದಿದ್ದಾಗ ನಿಮಗೆ ಸರಿಗಟ್ಟಿ ಕೆಲವರು ನನ್ನನ್ನು ಹೊಗಳುವರು. ಇದು ಸರಿಯೆ? ಲಿಂಗದೇವಾ, ಸಮಾಜ ಸೇವೆಯಿಂದ ಸಂಗನ ಬಸವಣ್ಣನು ಬದುಕಿದ್ದಾನೆ ಎಂಬುದನ್ನು ಇಡೀ ಜಗತ್ತು ಬಲ್ಲದು ಕಾಣಾ.

1330. ದೇವರ ಘನತೆ

ಜನನವಿಲ್ಲದ ಜನಿತನು ನೀನು ನೋಡಯ್ಯಾ.
ಜನಿಯಿಸಿ ಸಂಸಾರವನರಿಯದ ನಿರ್ವಿಕಾರ ನೀನು ನೋಡಯ್ಯಾ.
ಭವಬಂಧನಗಳಿಲ್ಲದ ನಿತ್ಯ ನಿಜತತ್ವವು ನೀನು ನೋಡಯ್ಯಾ.
ನಿನ್ನ ಚರಣಸೇವೆಯ ಮಾಡಿ, ಎನ್ನ ಭವ ಹರಿಯಲೆಂದಿಪ್ಪೆನಲ್ಲದೆ,
ನಿಮ್ಮ ಘನವೆಂತೆಂದು ಅರಿಯೆ ನೋಡಯ್ಯಾ, ಲಿಂಗದೇವಾ.
ನೀನು ಕೊಂಡಾಡಲಾನು ಪ್ರಾಪ್ತನೆ ಹೇಳಾ, ಪ್ರಭುವೆ !

ಹುಟ್ಟು ಇಲ್ಲದೆ ಅಸ್ತಿತ್ವ ಹೊಂದಿರುವ ಘನವಂತನು ನೀನು. ಎಲ್ಲ ಮಾನವರಂತೆ ಜನಿಸಿ ಸಂಸಾರದಲ್ಲಿ ಸಿಕ್ಕಿಹಾಕಿಕೊಳ್ಳದ ನಿರ್ವಿಕಾರ ನೀನು. ಹುಟ್ಟು ಸಾವುಗಳ ತಿರುಗುವ ಚಕ್ರ ಭವಬಂಧನವಿಲ್ಲದ ನಿತ್ಯವಾದ ನಿಜ ತತ್ವವು ನೀನು. ನಿಮ್ಮ ಚರಣ ಸೇವೆಯನ್ನು ಮಾಡಿ ನಾನು ಭವವನ್ನು ಕಳೆದುಕೊಳ್ಳಬೇಕೆಂದು ಇರುವೆನಲ್ಲದೆ ನಿಮ್ಮ ಘನತೆಯನ್ನು ಅರಿಯಲು ಸಮರ್ಥನಲ್ಲ. ಲಿಂಗದೇವಾ, ನಿನ್ನಿಂದ ಹೊಗಳಿಸಿಕೊಳ್ಳುವಷ್ಟು ನಾನು ಘನವಂತನೆ ಹೇಳಾ.

ಈ ವಚನವು ದೇವರಿಗೂ ಅನ್ವಯವಾಗುವುದು; ಅಲ್ಲಮ ಪ್ರಭುವಿಗೂ ಅನ್ವಯವಾಗುವುದು ಪ್ರಭುವೆ ಎಂದಿರುವಲ್ಲಿ ದೇವರನ್ನು ಕುರಿತು ಅನ್ವಯಿಸಬಹುದು; ಅಲ್ಲಮ ಪ್ರಭುವಿನ ಹೆಸರನ್ನು ಅನ್ವಯಿಸಬಹುದು. ನೀನು ಕೊಂಡಾಡಲು ಆನು ಪ್ರಾಪ್ತನೆ ಹೇಳಾ? ಎಂಬ ವಾಕ್ಯ ಪ್ರಭುದೇವರನ್ನು ಸೂಚಿಸುತ್ತದೆ. ಅವರು ಗುರು ಬಸವಣ್ಣನವರನ್ನು ಮನ ತುಂಬಿ ಹೊಗಳಿದಾಗ ಸಂಕೋಚಗೊಂಡ ಬಸವಣ್ಣನವರು ಹೀಗೆ ಹೇಳಿರಬಹುದು. "ಪ್ರಭುವೇ, ನನ್ನ ಭವವನ್ನು ಹರಿದುಕೊಳ್ಳಲು ನಾನು ನಿಮ್ಮ ಸೇವೆ ಮಾಡುತ್ತಿದ್ದೇನೆಯೇ ಹೊರತು ನಿಮ್ಮ ವ್ಯಕ್ತಿತ್ವ ಅರಿಯಲು ಸಮರ್ಥನಲ್ಲ. ನೀವು ಕೊಂಡಾಡಲು ನಾನು ಅರ್ಹನೂ ಅಲ್ಲ."

(ಮುಂದುವರಿಯುವುದು....)

ಆಧಾರ ರಹಿತ ಹೇಳಿಕೆ

ಈಚೆಗೆ ಶ್ರೀ ಮಾತೆ ಮಹಾದೇವಿಯವರು ಬಸವಣ್ಣನವರ ಜೀವಮಾನ ಕಾಲಾವಧಿ 30.4.1134 ರಿಂದ 30.7.1196 ಎಂದೂ, ಅಂದರೆ ಅವರು 62 ವರ್ಷ 3 ತಿಂಗಳು, 2 ದಿನ ಬಾಳಿದ್ದು ಎಂದೂ, ಅವರದು ಇಚ್ಛಾಮರಣ ಎಂದೂ ಹೇಳಿ, ಅದಕ್ಕೆ ಅವರ ವಚನಗಳಲ್ಲೇ ಆಧಾರ ಇದೆ ಎಂದೂ ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಬಸವಣ್ಣನವರ ವಚನಗಳ ಯಾವ ಆವೃತ್ತಿಯಲ್ಲಿ ಎಷ್ಟನೇ ವಚನ ಅಥವಾ ವಚನಗಳಲ್ಲಿ ಆ ಸಂಗತಿ ಉಲ್ಲೇಖವಾಗಿದೆ ಎಂಬುದನ್ನು ಶ್ರೀ ಮಾತೆ ಮಹಾದೇವಿಯವರು ಪತ್ರಿಕೆಗಳ ಮೂಲಕ ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ. ಹಾಗೆಯೇ ಬಸವಣ್ಣನವರು ಇಚ್ಛಾಮರಣವನ್ನು ಪಡೆಯಲು ಸಂಕಲ್ಪವನ್ನು ತೊಟ್ಟ ವಿಷಯವೂ ಯಾವ ವಚನದಲ್ಲಿ ಬಂದಿದೆ ಎಂಬುದನ್ನು ಸ್ಪಷ್ಟಪಡಿಸಲಿ. ಬಸವಣ್ಣನವರ ಅಂಕಿತ 'ಕೂಡಲ ಸಂಗಮದೇವ' ಅಲ್ಲ, 'ಲಿಂಗದೇವ' ಎಂಬ ಆಧಾರ ರಹಿತ ಹೇಳಿಕೆಯನ್ನೂ ಹಿಂದೆ ಅವರು ನೀಡಿದ್ದರು.

– ಎಂ. ಚಿದಾನಂದ ಮೂರ್ತಿ
ವಿಜಯವಾಣಿ –19–8–2013

ಗುರು ಬಸವಣ್ಣನವರ ಲಿಂಗೈಕ್ಯ– ವಚನಗಳ ಆಧಾರ

– ಮಾತಾಜಿ

ಗುರು ಬಸವಣ್ಣನವರ ಜೀವಿತಾವಧಿಯ ಬಗ್ಗೆ ನಾನು ಆಧಾರ ರಹಿತ ಹೇಳಿಕೆ ನೀಡಿರುವುದಾಗಿ ಡಾ॥ ಎಂ.ಚಿದಾನಂದ ಮೂರ್ತಿಯವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. (ವಿಜಯವಾಣಿ ಜನಮತ ವಿಭಾಗ .ದಿ.19–8–2013) ಕಾಲಜ್ಞಾನ ವಚನಗಳು ಬಹಳ ಮಹತ್ವಪೂರ್ಣ ಮಾಹಿತಿಯನ್ನು ನೀಡುತ್ತವೆ. ಗುರು ಬಸವಣ್ಣನವರು ಜನಿಸಿದ್ದು ಆನಂದ ನಾಮ ಸಂವತ್ಸರ ವೈಶಾಖಮಾಸದ ಅಕ್ಷಯ ತೃತೀಯದಂದು ರೋಹಿಣಿ ನಕ್ಷತ್ರದಲ್ಲಿ. ಅವರು ಲಿಂಗೈಕ್ಯರಾದುದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿಯಂದು. ಶ್ರೀ ಕನ್ನುಸ್ವಾಮಿ ಪಿಳ್ಳೆಯವರ ಇಂಡಿಯನ್ ಎಫಿಮರೀಸ್ ಆಧಾರದ ಮೇಲೆ ಭಾರತೀಯ ಕಾಲಮಾನವನ್ನು ಕ್ರಿಸ್ತಶಕಕ್ಕೆ ಪರಿವರ್ತಿಸಿದರೆ ಹುಟ್ಟು ದಿ.30–4–1134ಕ್ಕೆ ಲಿಂಗೈಕ್ಯ 30–7–1196ಕ್ಕೆ ಬರುತ್ತದೆ. ಕಲ್ಯಾಣ ಕ್ರಾಂತಿ ನಡೆದುದು ರಾಕ್ಷಸನಾಮ ಸಂವತ್ಸರದಲ್ಲಿ. ಇದು ಕ್ರಿ.ಶ.1196ಕ್ಕೆ ಸಂವಾದಿಯಾಗಿದೆ. ಹೀಗಾಗಿ ಗುರು ಬಸವಣ್ಣನವರು ಜೀವಿಸಿದ್ದು 62 ವರ್ಷ 3 ತಿಂಗಳು 2 ದಿನ ಎಂದು ಖಚಿತವಾಗಿ ಹೇಳಬಹುದು.

ಕೆಲವು ಸಾಹಿತಿಗಳು ಗುರು ಬಸವಣ್ಣನವರು ಜೀವಿಸಿದ್ದು ಕೇವಲ 36 ವರ್ಷ ಎಂದು ಹೇಳುತ್ತಾರೆ. ಇದು ಸೂಕ್ತವಲ್ಲ. ಗುರು ಬಸವಣ್ಣನವರ ಒಂದು ವಚನ ಹೀಗಿದೆ.

ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ
ಅಯ್ಯಾ ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರುಷ
ಅಯ್ಯಾ, ಹಿಂದಿನಂತನುಭವ ಹಿಂದಿನಂತೆ ಭಕ್ತಿಯಿಲ್ಲ
ಮೂರು ಮಾಸದೊಳಗಾಗಿ
ಇಲ್ಲಿ ಆಡಲುಭಯವಿಲ್ಲ ಕೇಳಯ್ಯಾ, ಕೂಡಲಸಂಗಮದೇವಾ

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು –1166
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ಈ ವಚನದ ಪ್ರಕಾರ ಕಲ್ಯಾಣವು ಗುರು ಬಸವಣ್ಣನವರ ಇರುವಿಕೆಯಿಂದ 36 ವರ್ಷಗಳ ಕಾಲ ಭಕ್ತಿಯ ಬೀಡಾಯಿತು. ಅನುಭವ ಮಂಟಪವು ಅವರು ಕಲ್ಯಾಣಕ್ಕೆ ಬಂದ 9 ವರ್ಷಗಳ ನಂತರ ನಿರ್ಮಾಣವಾಗಿ 27 ವರ್ಷ ನಡೆಯಿತು. ವರ್ಣಾಂತರ ವಿವಾಹವಾದ 3 ತಿಂಗಳೊಳಗಾಗಿ ಎಲ್ಲವೂ ಅಸ್ತವ್ಯಸ್ತವಾಯಿತು. ಗುರು ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದ್ದು ವಿಕ್ರಮನಾಮ ಸಂವತ್ಸರ, ಶ್ರಾವಣ ಸೋಮವಾರದಂದು. ಕಲ್ಯಾಣದಿಂದ ನಿರ್ಗಮಿಸಿದ್ದು ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ ಮಂಗಳವಾರದಂದು. ಈ ವಚನಕ್ಕೂ ಕಾಲಜ್ಞಾನ ವಚನಗಳಲ್ಲಿ ಬರುವ ಇತಿಹಾಸ ನಿರೂಪಣೆಗೂ ಸಂಪೂರ್ಣ ಹೋಲಿಕೆ ಇದೆ. ಗುರು ಬಸವಣ್ಣನವರು ಮನೆಯಲ್ಲಿ ಇದ್ದುದು 8–9ವರ್ಷ, ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿದ್ದು 12 ವರ್ಷ, ವಿವಾಹವಾಗಿ ಮಂಗಳವೇಡೆಯಲ್ಲಿದ್ದುದು 5 ವರ್ಷ, ಕಲ್ಯಾಣದಲ್ಲಿದ್ದುದು 36 ವರ್ಷ ಎಂದು ಖಚಿತವಾಗಿ ಹೇಳಬಹುದು. ತೆಲುಗಿನಲ್ಲಿ ಬಸವಣ್ಣನವರ ಸಮಗ್ರ ವಚನಗಳನ್ನು ಭಾಷಾಂತರಿಸಿ "ಬಸವ ವಚನಾಮೃತಮು" ಪ್ರಕಟಿಸಿರುವ ಡಾ॥ ಬಾಡಾಲ ರಾಮಯ್ಯನವರು ಅದರಲ್ಲಿ ಅತ್ಯಂತ ಅಧಿಕೃತವಾಗಿ ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಶುದ್ಧ ಪಂಚಮಿಯಂದು ಎಂಬುದನ್ನು ಕಾಲಜ್ಞಾನ ವಚನಗಳ ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ.

ಇಚ್ಛಾಮರಣ : ಇದೊಂದು ಯೋಗವಿದ್ಯೆ. ಪ್ರಾಣಲಿಂಗಿ ಸ್ಥಲವನ್ನು ಸಾಧಿಸಿದವರೆಲ್ಲರೂ ಇಚ್ಛಾಮರಣದಿಂದಲೇ ದೇಹವನ್ನು ಬಿಟ್ಟಿದ್ದಾರೆ. ಉದಾ: ಗುರು ಬಸವಣ್ಣನವರು, ಅಲ್ಲಮಪ್ರಭುದೇವರು, ಅಕ್ಕಮಹಾದೇವಿ, ಎಡೆಯೂರು ಸಿದ್ಧಲಿಂಗೇಶ್ವರ ಮುಂತಾದವರು.

ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು
ತುಟಿ ಮಿಡುಕದೆ ಅಟ್ಟೆಯಾಡಿತ್ತಲ್ಲಾ !
ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ, ಕಟ್ಟು ಗುಡಿಯ
ಕೂಡಲಸಂಗಮದೇವ ಹಿಡಿವಡೆದ.

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು–814
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ಹೀಗೆ ಗುರು ಬಸವಣ್ಣನವರು ಯೋಗವಿದ್ಯೆಯಲ್ಲಿ ಬಲ್ಲಿದರಾಗಿದ್ದರು. ಅಂದು ಶ್ರಾವಣ ಶುದ್ಧ ಪಂಚಮಿ. ಎಂದಿನಂತೆ ಇಷ್ಟಲಿಂಗ ಯೋಗದಲ್ಲಿ ತಲ್ಲೀನರಾಗಿರುವಾಗ ಅವರಿಗೆ ದೇವನಿಂದ ಕರೆಬಂದಿತು. ಆಗ ಅವರು ಶರೀರವನ್ನು ತೊರೆದು ಪ್ರಾಣವನ್ನು ವಿಸರ್ಜಿಸಿ ಲಿಂಗದೇವನಲ್ಲಿ ಲೀನವಾಗಲು ಬಯಸಿ ಪ್ರಾರ್ಥಿಸುವರು.

ಅಯ್ಯಾ ಹಿಂದೆಯಾನು ಮಾಡಿದ ಮೆರಹಿಂದ ಬಂದೆನೀ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಆಡಿ ಹಾಡಿ,
ಆ ದಾಸೋಹವೆಂಬ ಮಹಾಗಣಸಂಕುಳದೊಳೆನ್ನನಿರಿಸಿ,
ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿ,
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ
ಮೂವತ್ತಾರು ಕೊಂಡೆಯವ ಗೆಲಿಸಿ,
ಎಂಬತ್ತೆಂಟು ಪವಾಡಗಳಂ ಕೊಂಡಾಡಿ,
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ
ನಿಮ್ಮ ಮಹಾಗಣಂಗಳು ಮೆಚ್ಚಿ ಎನ್ನ ಸೂತಕವ ತೊಡೆದು
ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಂಬಂಧ ಸಯವಾಯಿತ್ತು
ನೀವು ಕಳುಹಿದ ಬೆಸನು ಸಂದಿತ್ತು,
ಉಘೇ! ಇನ್ನು ಕೂಡಿಕೊಳ್ಳಾ ಕೂಡಲಸಂಗಮದೇವಾ.

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು –1381
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ಅವರ ಪ್ರಾರ್ಥನೆ ಮುಂದುವರಿಯುವುದು.

ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ?
ಬಯಲ ಮರೀಚಿ ಜಲಕ್ಕೆ ಕೆಸರುಂಟೆ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ?
ಕೂಡಲಸಂಗಮದೇವಾ.
ನಿಮ್ಮ ಚರಣಕಮಲದೊಳಗೆನ್ನ ಇಂಬಿಟ್ಟುಕೊಳ್ಳಯ್ಯಾ.

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು–1390
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು
ಆ ಮರಕ್ಕೆ ಕೊಂಬೆ ಎರಡು, ಎಲೆ ಮೂರು
ಮೂವತ್ತಾರು ಪುಷ್ಪ, ಕಾಯಿ ಒಂದೆ!
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ !
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು.
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು.
ಪ್ರಭುವಿನ ಕಾರುಣ್ಯ ಪ್ರಸಾದವ ನಾನು ಕೊಂಡೆನಾಗಿ,
ಕೂಡಲಸಂಗಮದೇವರು ಇತ್ತ ಬಾರೆಂದು
ತಮ್ಮ ಹೃದಯ ಕಮಲದಲ್ಲಿ ಇಂಬಿಟ್ಟುಕೊಂಡರು.

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು –1391
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

“ಇತ್ತ ಬಾರೆಂದು ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು.” ಎಂಬ ವಾಕ್ಯ ಗುರು ಬಸವಣ್ಣನವರ ಲಿಂಗೈಕ್ಯದ ಸ್ಥಿತಿಯನ್ನು ಹೇಳುತ್ತದೆ. ಇನ್ನೂ ಮುಂದುವರಿದು ಹೇಳುತ್ತಾರೆ.

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ
ಅರಿವನ್ನಕ್ಕರ ಹಾಡಿ ಹೊಗಳಿದೆ.
ಅರಿವುಗೆಟ್ಟು ಮರಹು ನಷ್ಟವಾಗಿ
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ
ಕೂಡಲಸಂಗಮದೇವನಲ್ಲಿ ಸರ್ವ ನಿವಾಸಿಯಾಗಿರ್ದೆನು.

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು –1386
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ದೇವನಲ್ಲಿ ಸರ್ವ ನಿವಾಸಿಯಾಗಿರ್ದೆನು ಎಂಬ ವಾಕ್ಯವು ಬಹಳ ಮಹತ್ವಪೂರ್ಣ ಎನ್ನಿಸದಿರದು. ಲಿಂಗೈಕ್ಯರಾಗುವ ಕಡೆಯ ಕ್ಷಣದವರೆಗೆ ವಚನಗಳನ್ನು ಬರೆದಿರುವ ಗುರು ಬಸವಣ್ಣನವರ ಕಟ್ಟ ಕಡೆಯ ವಚನ ಎನ್ನಬಹುದಾದುದು ಇದು.

ಭಕ್ತಿ ಎಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವಾ ತನಗೆ ಬೇಕೆಂದು ಎತ್ತಿಕೊಂಡ

–ಬ. ಷಟ್ಸ್ಥಲದ ಹೆಚ್ಚಿನ ವಚನಗಳು –524
(ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

ಕುಂಡಲಿನಿ ಶಕ್ತಿಯನ್ನು ಊರ್ಧ್ವಮುಖವಾಗಿ ಏರಿಸಿ ಹೃದಯ ಕಮಲದಲ್ಲಿ ಕೊಂಚಕಾಲ ನಿಲ್ಲಿಸಿ, ಮತ್ತೆ ಶಿಖಾ ಚಕ್ರದವರೆಗೆ ಒಯ್ದು ಪಶ್ಚಿಮಚಕ್ರದ ಮೂಲಕ ಪ್ರಾಣವನ್ನು ವಿಸರ್ಜಿಸಿದ ನಿಷ್ಪತ್ತಿಯ ಹಣ್ಣಾದ ಗುರು ಬಸವಣ್ಣನವರ ಚೈತನ್ಯವು ಉರಿಯುಂಡ ಕರ್ಪುರದಂತೆ ದೇವನಲ್ಲಿ

ಬೆರೆಯಿತು ಎಂಬುದನ್ನು ಈ ವಚನವು ಸ್ಪಷ್ಟಪಡಿಸುತ್ತದೆ. ಲಿಂಗೈಕ್ಯರಾಗುವಾಗ ಯಾವುದೇ ಭಯವಾಗಲಿ, ಆತಂಕವಾಗಲಿ, ಅಧೈರ್ಯವಾಗಲಿ ಕಾಣದೆ ಯೋಗಿಕ ಸ್ಥಿತಿಯಿಂದ ಗುರು ಬಸವಣ್ಣನವರು ಪ್ರಾಣಬಿಟ್ಟಿರುವುದಕ್ಕೆ ಆತ್ಮಕಥೆಯಂತಿರುವ ವಚನಗಳೇ ಸಾಕ್ಷಿಯಾಗಿವೆ.

ಬಸವಣ್ಣನವರ ಅಂಕಿತ ಕೂಡಲ ಸಂಗಮದೇವ ಅಲ್ಲ 'ಲಿಂಗದೇವ' ಎಂಬ ಆಧಾರ ರಹಿತ ಹೇಳಿಕೆಯನ್ನು ಹಿಂದೆ ಅವರು ನೀಡಿದ್ದರು ಎಂದು ಡಾ॥ಚಿ.ಮೂ ಹೇಳಿದ್ದಾರೆ. ಗುರು ಬಸವಣ್ಣನವರ ಜೀವನದಲ್ಲಿ 3 ಘಟ್ಟಗಳು ಬರುತ್ತವೆ. ಬಹುದೇವತೋಪಾಸನೆ, ಏಕ ದೇವತಾ ಉಪಾಸನೆ, ಏಕದೇವೋಪಾಸನೆ ಎಂಬುದಾಗಿ. ಬಾಲ್ಯದಲ್ಲಿ ಮನೆಯ ಸಂಪ್ರದಾಯದಂತೆ ಬಹುದೇವತೋಪಾಸಕರಾಗಿದ್ದರು. ನಂತರ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುವಾಗ ಸಂಗಮೇಶ್ವರನ ಅರ್ಚಕರಾಗಿ ಏಕದೇವತೋಪಾಸಕರಾಗಿ ಶಿವನೇ ದೈವ, ಅವನಿಗೆ ಸರಿ ಸಮಾನರಾರಿಲ್ಲ ಎಂದು ನಂಬಿದ್ದರು.21ನೆಯ ವಯಸ್ಸಿನಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾದಾಗ ಬ್ರಹ್ಮ ವಿಷ್ಣು ಈಶ್ವರ- ಮೂವರನ್ನೂ ಮೀರಿದ ಶಕ್ತಿ ಪರಮಾತ್ಮ ಅವನನ್ನು ಆರಾಧಿಸಬೇಕು ಎಂದು ಅರಿತು ಗುರು ಬಸವಣ್ಣನವರು ಪರಮಾತ್ಮನನ್ನು ಲಿಂಗದೇವ ಎಂದು ಕರೆದುದಲ್ಲದೆ ನಿರಾಕಾರ ದೇವರನ್ನು ಪೂಜಿಸಲು ಗೋಳಾಕಾರದ ಇಷ್ಟಲಿಂಗವನ್ನು ರೂಪಿಸಿಕೊಟ್ಟರು. ಈ ಸತ್ಯವನ್ನು ಸಂಶೋಧಿಸಿದ ನಾನು ಶಿವ ಸೂಚಕವಾದ ವಚನಗಳಲ್ಲಿ ಕೂಡಲ ಸಂಗಮದೇವ ಅಂಕಿತವನ್ನು ಹಾಗೆಯೇ ಇಟ್ಟು ನಿರಾಕಾರ ದೇವರ ಸೂಚಕವಾದ ವಚನಗಳಲ್ಲಿ ಲಿಂಗದೇವ ಅಂಕಿತವನ್ನು ಬಳಸಿದ್ದೇನೆ. ಇದ್ದರಿಂದ ಗುರು ಬಸವಣ್ಣನವರ ಅಮೂಲ್ಯ ತತ್ವಗಳಲ್ಲಿ ಒಂದಾದ ಏಕದೇವೋಪಾಸನೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

[ವಿಜಯವಾಣಿ, 23-8-2013]
20-8-2013

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

ಅನಗತ್ಯ ಗೊಂದಲ ಬೇಡ

ಬಸವಣ್ಣನವರ ಜೀವಮಾನದ ಬಗ್ಗೆ ಮಾತೆ ಮಹಾದೇವಿಯವರು ಬರೆದ ಲೇಖನ (ಆ.23, ವಿಜಯವಾಣಿ) ಓದಿದ ಮೇಲೆ ನನಗನಿಸಿದ್ದು, ಬಸವಣ್ಣನವರ ಜೀವಿತಾವಧಿಯ ಬಗ್ಗೆ ಅನೇಕ ಅನುಮಾನಗಳನ್ನು ಅವರ ಅನುಯಾಯಿಗಳಾದ ನಾವೇ ಹುಟ್ಟು ಹಾಕುತ್ತಿದ್ದೇವೆ. ಮಹಾತ್ಮರ ಹುಟ್ಟು-ಸಾವಿನ ಬಗ್ಗೆ ನಮಗೇಕೆ ವೃಥಾ ಚಿಂತೆ? ನದಿಮೂಲ ಋಷಿಮೂಲ ಹುಡುಕಬಾರದೆಂದು ಅನುಭಾವಿಗಳ ಹೇಳಿಕೆ. ಈ ಬಗ್ಗೆ ಯೋಚಿಸುವುದನ್ನು ಬಿಟ್ಟು ಅವರು ನಡೆದ ದಾರಿಯಲ್ಲಿ ತೋರಿದ ಸತ್ಯದ ಕಡೆಗೆ ಸಾಗಿದರೆ ಸಾಲದೆ?ಅನಗತ್ಯ ಗೊಂದಲಗಳನ್ನು ಸೃಷ್ಟಿ ಮಾಡಿ ಜನರನ್ನು ಕಂಗೆಡಿಸುತ್ತಿರುವುದೇಕೆ? ಈ ವಿವಾದವನ್ನು ಕೆದಕುತ್ತಿರುವ ಸಂಶೋಧಕರು, ಸಾಹಿತಿಗಳು, ಮಠಾಧಿಪತಿಗಳ ಮರ್ಮವಾದರೂ ಏನು? ಬಸವಣ್ಣನವರು ಸರ್ವಜನ ಬಂಧು. ಅವರ ಬಗ್ಗೆ ಕಿತ್ತಾಟ ಏಕೆ? ಇದನ್ನು ಆದಷ್ಟು ಬೇಗನೆ ನಿಲ್ಲಿಸುವುದು ಒಳಿತು.

– ಕೆ.ಎಂ.ರೇವಣ್ಣ, ಬೆಂಗಳೂರು
ವಿಜಯವಾಣಿ –29-8-2013

ನನ್ನ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಬಂದ ಒಂದು ಅಸಂಬದ್ಧ ಪತ್ರವಿದು. ಒಬ್ಬ ಮಹಾಪುರುಷರ ಹುಟ್ಟಿದ ಮತ್ತು ಐಕ್ಯರಾದ ದಿನಾಂಕಗಳನ್ನು ಖಚಿತ ಪಡಿಸಿಕೊಳ್ಳುವುದು ಅತ್ಯಂತ ಅಗತ್ಯ. ಅದರ ಬಗ್ಗೆ ಚರ್ಚೆ ಮಾಡುವುದು ಅನುಮಾನಗಳನ್ನು ಏಕೆ ಹುಟ್ಟು ಹಾಕುತ್ತದೆ? ಚರ್ಚೆಯಿಂದ ಸತ್ಯವು ಹೊರಬರುತ್ತದೆ. ಬುದ್ಧ 2500 ವರ್ಷಗಳಿಗೂ ಪೂರ್ವದವನು. ಆತನು ಹುಟ್ಟಿದ ಬಗ್ಗೆ, ದಿನಾಂಕದ ಬಗ್ಗೆ, ಸ್ಥಳದ ಬಗ್ಗೆ ಮಾತ್ರವಲ್ಲ

ಸಾಕ್ಷಾತ್ಕಾರವಾದ ಸ್ಥಳ, ದಿನದ ಬಗ್ಗೆ ಖಚಿತತೆ ಇದೆ. ಆತನು ನಿರ್ವಾಣ ಹೊಂದಿದ ಸ್ಥಳ ಹಾಗೂ ದಿನದ ಬಗ್ಗೆ ಸಹ ಖಚಿತತೆ ಇದೆ. ಅದೇ ರೀತಿ ಏಸುಕ್ರಿಸ್ತರು ಆಗಿಹೋಗಿ 2000 ದಾಟಿವೆ. ಆದರೆ ಹುಟ್ಟಿದ, ದೀಕ್ಷಾ ಸ್ನಾನವಾದ, ಶಿಲುಬೆಗೇರಿಸಿದ, ಪುನರುತ್ಥಾನ ಹೊಂದಿದ ದಿನಗಳ ಬಗ್ಗೆ ಖಚಿತತೆ ಇದೆ. ಅದೇ ರೀತಿ ಮಹಮದ್ ಪೈಗಂಬರರು ಹುಟ್ಟಿದ ದಿನ, ಹೀರಾಗುಹೆಯಲ್ಲಿ ಅವತೀರ್ಣವಾದ ದಿನ, ಕಡೆಯಲ್ಲಿ ಐಕ್ಯರಾದ ದಿನದ ಬಗ್ಗೆ ಖಚಿತತೆ ಇದ್ದು ಅನುಯಾಯಿಗಳು ಆ ದಿನಗಳಂದು ಹಬ್ಬಗಳನ್ನು ಆಚರಿಸುತ್ತಾರೆ. ಗುರು ಬಸವಣ್ಣನವರು ಆಗಿ ಹೋಗಿ 880 ವರ್ಷಗಳು ಮಾತ್ರ ಆಗಿವೆ. ಈವರೆಗೂ ಖಚಿತವಾದ ದಿನಾಂಕಗಳ ಬಗ್ಗೆ ಜನರಲ್ಲಿ ತಿಳುವಳಿಕೆಯಿಲ್ಲ. ಇದನ್ನರಿತು ನಾನು ಅಧಿಕೃತವಾಗಿ ಅಧ್ಯಯನ ಮಾಡಿ ಹುಟ್ಟಿದ, ಸಾಕ್ಷಾತ್ಕಾರವಾಗಿ ಇಷ್ಟಲಿಂಗ ಕಂಡು ಹಿಡಿದ ಮತ್ತು ಲಿಂಗೈಕ್ಯರಾದ ದಿನಗಳ ಬಗ್ಗೆ ಬರೆದಿದ್ದೇನೆ. ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಮನಸ್ಸು ಬಹಳ ಜನ ಸಾಹಿತಿಗಳಿಗೆ, ಸಮಾಜದ ಗಣ್ಯರಿಗೆ ಇಲ್ಲ. ಲಿಂಗೈಕ್ಯರಾದ ದಿನ ಕುರಿತು ಶರಣ.ಡಾ॥ ಬಾಡಾಲ ರಾಮಯ್ಯ ಮಹತ್ವಪೂರ್ಣ ಅಧ್ಯಯನ ಮಾಡಿದರೂ ನಮ್ಮ ಸಮಾಜ ಗಮನಿಸದಿರುವ ಬಗ್ಗೆ ಅವರು ಬಹಳ ನೊಂದುಕೊಂಡಾಗ ನಾವು 1977ರಲ್ಲಿ ಬಸವ ಪಂಚಮಿ ಆಚರಣೆ ಶುರು ಮಾಡಿದೆವು; ಈ ಸತ್ಯವನ್ನು ಕಂಡು ಹಿಡಿದುದಕ್ಕಾಗಿ ಅವರನ್ನು ಆಹ್ವಾನಿಸಿ, ಸನ್ಮಾನಿಸಿದೆವು. ನಾವು ಮತ್ತು ನಮ್ಮ ರಾಷ್ಟ್ರೀಯ ಬಸವ ದಳಗಳವರನ್ನು ಬಿಟ್ಟರೆ ಬಸವ ಲಿಂಗೈಕ್ಯ ದಿನವನ್ನು ಇನ್ನಿತರ ಸಂಘ–ಸಂಸ್ಥೆಗಳವರು ಆಚರಿಸದಿರುವುದರಲ್ಲಿ ಮಾತ್ಸರ್ಯವೇ ತುಂಬಿದೆ ಎಂದರೆ ಉತ್ಪ್ರೇಕ್ಷೆಯಲ್ಲ. 100 ವರ್ಷಗಳ ಹಿಂದೆ ಶರಣ.ಹರ್ಡೇಕರ್ ಮಂಜಪ್ಪನವರು ಮತ್ತು ಪೂಜ್ಯ ಮುರುಘಾಮಠದ ಮೃತ್ಯುಂಜಯ ಅಪ್ಪನವರಿಂದ ಬಸವ ಜಯಂತಿ ಆಚರಣೆ ಶುರುವಾದಾಗಲೂ ಬಹುಶಃ ಸಮಾಜವು ತಣ್ಣನೆಯ ಪ್ರತಿಕ್ರಿಯೆ ತೋರಿರಬಹುದು ಈಗ ಶತಮಾನೋತ್ಸವ ಆಚರಣೆ ಮಾಡುತ್ತಿಲ್ಲವೆ?? ಹಾಗೆ ಬಸವ ಲಿಂಗೈಕ್ಯ ದಿನದ ಆಚರಣೆಯ ಆರಂಭದ ವರ್ಷ (1977)ದ ಶತಮಾನೋತ್ಸವ ಆಚರಿಸಲು ಶ್ರೀ ಅರವಿಂದ ಜತ್ತಿಯವರಂಥವರು ಹುಟ್ಟಿಯೇ ಹುಟ್ಟುತ್ತಾರೆ. ನಮ್ಮ ಸಮಾಜದ್ದು ಬಹಳ ನಿಧಾನದ ನಡಿಗೆ!

ಶ್ರೀ ಡಾ॥ ಎಸ್.ವಿದ್ಯಾಶಂಕರ್ ಅವರು ನನ್ನ ಲೇಖನಕ್ಕೆ ಪ್ರತಿಕ್ರಿಯೆಯಾಗಿ 'ಒಂದು ನಿರಾಧಾರ ಊಹೆ' ಎಂದು ಉತ್ತರವನ್ನು (ವಿಜಯವಾಣಿ 31-8-2013) ಬರೆದಿದ್ದಾರೆ. "ಬಸವ ವಚನಾಮೃತಮು" ಎಂಬ ತೆಲುಗು ಕೃತಿಯ ಸುದೀರ್ಘ ಮುನ್ನುಡಿಯಲ್ಲಿ ಡಾ॥ ಬಾಡಾಲ ರಾಮಯ್ಯನವರು ಗುರು ಬಸವಣ್ಣನವರು 1196ರವರೆಗೆ ಜೀವಿಸಿದ್ದರು ಎಂಬುದನ್ನು ಸಾಧಾರಪೂರ್ವಕವಾಗಿ ಚಿತ್ರಿಸಿದ್ದಾರೆ. ಡಾ॥ ವಿದ್ಯಾಶಂಕರ್ ಅವರು 'ಕಾಲಜ್ಞಾನ ವಚನ' ಮತ್ತು 'ಬಸವಣ್ಣನವರ ಷಟಸ್ಥಲದ ಹೆಚ್ಚಿನ ವಚನಗಳ' ಬಗ್ಗೆ ಹಗುರವಾಗಿ ಭಾವಿಸಿರುವುದು ವಿಷಾದನೀಯ. ಇಂದು ಸಾರುವ ಅಯ್ಯನವರು ರೆಕ್ಕೆ ಪುಕ್ಕ ಸೇರಿಸಿ ಏನೇನನ್ನೋ ಹೇಳುತ್ತಾ ಹೋಗುತ್ತಿರಬಹುದು. ಆದರೆ ಹಿಂದಿನ ಕಾಲಜ್ಞಾನ ವಚನಗಳು ಮಹತ್ವಪೂರ್ಣ ದಾಖಲೆಗಳು. ಕೆಲವು ಶರಣರ ಮಾತುಗಳು ಆಧ್ಯಾತ್ಮಿಕ ಅನುಭೂತಿಯ ಫಲವಾಗಿ ಮುಂದೆ ಆಗುವ ಸಂಗತಿಗಳನ್ನು ಹೇಳುವ ಭವಿಷ್ಯ ಸೂಚಕ(prophetic sayings) ಮಾತುಗಳಾಗಿ ಇರುವವಾದರೂ ಹೆಚ್ಚಿನವು ಇತಿಹಾಸವನ್ನು ಬಿಂಬಿಸುತ್ತವೆ ಮತ್ತು ಕಲ್ಯಾಣ ಕ್ರಾಂತಿಯ ನಂತರ ನಡೆದ ವರ್ತಮಾನವನ್ನು ಪ್ರಚುರಪಡಿಸುತ್ತವೆ. ಕಾಲಜ್ಞಾನ ವಚನಗಳಲ್ಲಿ ವರ್ಣಾಂತರ ವಿವಾಹ ನಡೆದ ದಿನ, ಹರಳಯ್ಯ–ಮಧುವರಸರ ವಧೆಯಾದ ದಿನ, ಬಿಜ್ಜಳನ ಕೊಲೆಯಾದ ದಿನ ಎಲ್ಲವೂ ಖಚಿತವಾಗಿ ಸಿಗುತ್ತವೆ. ನನಗೆನಿಸುವ ಮಟ್ಟಿಗೆ ಕಲ್ಯಾಣ ಕ್ರಾಂತಿಯ ನಂತರ ಸಾರುವ ಕಾಯಕದ ಅಯ್ಯನವರು ನಡೆದ ಸಂಗತಿಗಳನ್ನು ಅನುಯಾಯಿಗಳಿಗೆ ಕಾಲಜ್ಞಾನ

ವಚನಗಳ ರೂಪದಲ್ಲಿ ಸಾರುತ್ತ ಹೋಗಿದ್ದಾರೆ. ಅವುಗಳಲ್ಲಿ ಅಲ್ಲಮಪ್ರಭು ದೇವರು ಶೂನ್ಯಪೀಠವನ್ನು ಆರೋಹಣ ಮಾಡಿದ ದಿವಸ, ಉಳವಿಯತ್ತ ವಚನ ಸಾಹಿತ್ಯ ಹೊತ್ತು ಸಾಗಿದ ಶರಣರ ತಂಡ ಬಿಜ್ಜಳನ ಸೈನ್ಯವನ್ನು ಎದುರಿಸಿದ ವಿವರ ಎಲ್ಲವೂ ಬರುತ್ತವೆ. ಕಾಲಜ್ಞಾನ ವಚನಗಳನ್ನು ಸಾರುವ ಅಯ್ಯನವರ ಹೇಳಿಕೆಗಳೆಂದು ಉಡಾಫೆ ಮಾಡದೆ, ಸಂಶೋಧಕರು, ಸಾಹಿತ್ಯಾಸಕ್ತರು ಗಂಭೀರವಾಗಿ ಅಧ್ಯಯನ ಮಾಡುವುದು ಒಳ್ಳೆಯದು. ಕಾಲಜ್ಞಾನ ವಚನಗಳ ಪ್ರಕಾರ ಗುರು ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದ್ದು, ವಿಕ್ರಮನಾಮ ಸಂವತ್ಸರದಲ್ಲಿ (ಕ್ರಿ.ಶ 1160) 36 ವರ್ಷಗಳ ಕಾಲ ಅಲ್ಲಿದ್ದು ವರ್ಣಾಂತರ ವಿವಾಹದ ಕಾರಣದಿಂದಾಗಿ ಗಡಿಪಾರಾಗಿ ಹೊರಟುದು ರಾಕ್ಷಸನಾಮ ಸಂವತ್ಸರದಲ್ಲಿ (ಕ್ರಿ.ಶ.1196) ಡಾ॥ ಕನ್ನುಸ್ವಾಮಿ ಪಿಳ್ಳೈಯವರ ಇಂಡಿಯನ್ ಎಫಿಮರೀಸ್ ಪ್ರಕಾರ ಈ ಇಸವಿಗಳು ಭಾರತೀಯ ಕಾಲಮಾನಕ್ಕೆ ಸಂವಾದಿಯಾಗುತ್ತವೆ.

12ನೆಯ ಶತಮಾನದ ನಂತರ ಕಲ್ಯಾಣ ಕ್ರಾಂತಿಯಿಂದಾಗಿ ವಚನ ಸಾಹಿತ್ಯವು ಸಂಕಷ್ಟಕ್ಕೆ ಸಿಲುಕಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ನೇತೃತ್ವದಲ್ಲಿ ಸಹ್ಯಾದ್ರಿಯ ಅರಣ್ಯಕ್ಕೆ ಒಯ್ದು ಉಳವಿಯ ಪರಿಸರದಲ್ಲಿದ್ದ ಗವಿಗಳಲ್ಲಿ ವಚನ ಸಾಹಿತ್ಯವನ್ನಿಟ್ಟು ರಕ್ಷಿಸಲಾಯಿತು. 15ನೇ ಶತಮಾನದ ನಂತರ ಅನೇಕ ಸಂಪಾದನಾಕಾರರು ವಚನಗಳ ಸಂಗ್ರಹ, ಸಂಪಾದನೆಗೆ ತೊಡಗಿದರು. ಆಗ ಅವರಿಗೆ ಲಭ್ಯವಾದ ಗುರು ಬಸವಣ್ಣನವರ ವಚನಗಳನ್ನು ಷಟಸ್ಥಲದ ಚೌಕಟ್ಟಿಗೆ ಒಳಪಡಿಸಿದರು. ಅದು ಸಾಂಪ್ರದಾಯಿಕ ಸಂಪಾದನೆಯಾಗಿ ರೂಢಿಗೆ ಬಂದಿತು. ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಿಸಿರುವ (ಪ್ರಥಮ ಮುದ್ರಣ ಆಗಸ್ಟ್ 1968, ಸಂಪಾದಕರು ಡಾ॥ ಆರ್.ಸಿ.ಹಿರೇಮಠ) "ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು" ಕೃತಿಯಲ್ಲಿ ಸಾಂಪ್ರದಾಯಿಕ ಸಂಪಾದನೆಯ 959 ವಚನಗಳ ಜೊತೆಗೆ ವಿವಿಧ ಆಕರಗಳಿಂದ ದೊರೆತ ವಚನಗಳನ್ನು "ಬಸವಣ್ಣನವರ ಷಟಸ್ಥಲದ ಹೆಚ್ಚಿನ ವಚನಗಳು" ಶೀರ್ಷಿಕೆಯ ಅಡಿಯಲ್ಲಿ ಸೇರಿಸಿ ಮುದ್ರಿಸಲಾಗಿದೆ. ಇವು ನಂತರ ಸಿಕ್ಕ ವಚನಗಳೇ ವಿನಾ ಅನಧಿಕೃತವಲ್ಲ, ಸಂಶಯಪಡುವಂಥವಲ್ಲ. ಈ ವಚನಗಳು ಬಹಳ ಮಹತ್ವ ಪೂರ್ಣವಾದ ತಾತ್ವಿಕ ಸಂಗತಿಗಳನ್ನಷ್ಟೇ ಅಲ್ಲದೆ ಸಾಮಾಜಿಕ, ಐತಿಹಾಸಿಕ ವಿಷಯಗಳನ್ನು ಬಿಂಬಿಸುತ್ತವೆ.

ಗುರು ಬಸವಣ್ಣನವರು ಲಿಂಗೈಕ್ಯರಾಗುವಾಗ ಬರೆದಿರುವ ವಚನಗಳನ್ನು ಐಕ್ಯಸ್ಥಲದ ವಚನ ಎಂದು ಡಾ॥ ವಿದ್ಯಾಶಂಕರ್ ಹೇಳಿರುವುದಕ್ಕೆ ನಗಬೇಕೋ ಅಳಬೇಕೋ ತಿಳಿಯದು. ಐಕ್ಯ ಸ್ಥಲದ ದಿವ್ಯಾನುಭೂತಿಯಲ್ಲಿ ಮೈಮರೆತಾಗ ಹೇಳುವ ಅನಿರ್ವಚನೀಯ ಆನಂದದ ವಚನಗಳೇ ಬೇರೆ. "ನೀವು ಹೇಳಿದ ಮಣಿಹವ ಮಾಡಿದೆ. ಇನ್ನು ಕೂಡಿಕೊಳ್ಳಾ" ಎಂಬ ವಾಕ್ಯ ಅತ್ಯಂತ ಸ್ಪಷ್ಟವಾಗಿ ಲಿಂಗದೇವನಲ್ಲಿ ಒಂದಾಗುವ ಹಂಬಲವನ್ನು ವ್ಯಕ್ತಪಡಿಸುತ್ತದೆ. "ಅಯ್ಯಾ ಹಿಂದೆ ನಾನು ಮಾಡಿದ ಮೆರಹಿಂದೆ" ಎಂಬ ವಚನದಲ್ಲಿ ತಮ್ಮ ಜೀವನದ ಪುನರವಲೋಕನ ಮಾಡಿಕೊಂಡು "ನನ್ನ ಕರ್ತವ್ಯ ಈ ಮರ್ತ್ಯದಲ್ಲಿ ಮುಗಿಯಿತು. ಇನ್ನು ನನ್ನನ್ನು ನಿನ್ನಲ್ಲಿ ಬೆರೆಸಿಕೊ." ಎಂಬ ಮಾತು ಕನ್ನಡಿ ಹಿಡಿದಷ್ಟು ಸ್ಪಷ್ಟವಾಗಿದೆ. ಮಾತ್ರವಲ್ಲ ಈ ವಚನಗಳಲ್ಲಿ ಇಚ್ಛಾಮರಣದ ಯೋಗಿಕ ಪ್ರಕ್ರಿಯೆ ಸ್ಪಷ್ಟವಾಗಿದೆ ಮತ್ತು ಕ್ರಮಬದ್ಧವಾಗಿದೆ. ಬೇರೆ ಬೇರೆ ಮೂಲಗಳಿಂದ ದೊರೆತ ವಚನಗಳನ್ನು ಸೇರಿಸಿ 'ಹೆಚ್ಚಿನ ವಚನಗಳು' ಎಂದು ಪ್ರಕಟಿಸಿರುವಾಗ ಅವುಗಳ ಪ್ರಾಮಾಣಿಕತೆಯನ್ನು ಸಂದೇಹಿಸುವುದು ಹಾಸ್ಯಾಸ್ಪದ. ಇಂಥ ಕುತರ್ಕ ಮಾಡುತ್ತ ಷಟಸ್ಥಲದ ವಚನಗಳನ್ನೂ ಸಂದೇಹಿಸಿ, ಕಡೆಗೆ ಗುರು ಬಸವಣ್ಣನವರ ಅಸ್ತಿತ್ವದ ಬಗ್ಗೆಯೇ ಸಂದೇಹ ಪಡುವಂತಾಗಬಾರದಲ್ಲವೆ?

31–8–2013

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ



ಶರಣೆ. ಸತ್ಯಕ್ಕ



Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)